ಸಂಪುಟ : 8 ಸಂಚಿಕೆ : 283 ಪುಟ : 4 ಬೆಲೆ : 3.00 ಗುರುವಾರ ಡಿಸೆಂಬರ್ 21, 2023 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್. ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 8 Issue : 283 Pages : 4 Price : 3.00 Thursday December 21, 2023 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25

## ಇಂದಿನ ನೀರು ಪೂರೈಕೆ ವಿವರ

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಬೆಟಗೇರಿ ಅವಳಿ ನಗರದಲ್ಲಿ ಡಿ. 21 ರಂದು ಈ ಕೆಳಗಿನ ಸ್ಥಳಗಳಿಗೆ ನೀರು ಪೂರೈಕೆ ಮಾಡಲಾಗುವುದು.

**ಸ್ಥಳಗಳ ವಿವರ :** ವಾರ್ಡ್ ನಂ. 29 ಮಸೂತಿ ಲೈನ್ ಮೇಲಿನ ಭಾಗ ಕೆಳಗಿನ ಭಾಗ, ರಾಜೀವ ಗಾಂಧಿ ನಗರ, ಚಂದಾವರಿ ಲೈನ್, ನೆಲ್ಸನ್ ಮಂಡೆಲಾ. ವಾರ್ಡ್ ನಂ. 16,17 ಶಹಾಪುರ ಪೇಟೆ, ಡಿಸಿ ಮಿಲ್ ರೋಡ್, ಭಜಂತ್ರಿ ಓಣಿ, ಡೋರಗಲ್ಲಿ, ಮಹೇಂದ್ರಕರ್ ಸರ್ಕಲ್ ಲೈನ್, ಗಾಂಧಿ ಸರ್ಕಲ್ ಲೈನ್, ಜವಳಗಲ್ಲಿ ಮೀನದ ಮಾರ್ಕೆಟ್, ಬಸವೇಶ್ವರ ಗುಡಿ ಲೈನ್, ಗಣೇಶ ಗುಡಿ ಲೈನ್,

ವಾರ್ಡ್ ನಂ 21, 22, 23 ಕಗನಳ್ಳಿ, ಹೆಬ್ಸೂರ್ ಹಾರೋಗೇರಿ ಭಾಗ –1,2 ಹೊನ್ನೇತಮ್ಮ ಭಾಗ –1,2 ಉಸುಕಿನ ಕಟ್ಟಿ ಗಂಜಿ ಬಸವೇಶ್ವರ ಸರ್ಕಲ್, ಜಂತ್ಲಿಯರ ಓಣಿ, ಕುಂಬಾರ ಓಣಿ, ಕಮತರ ಲೈನ್, ದ್ಯಾಮವ್ವನ ಕಟ್ಟಿ, ಬನ್ನಿ ಮಹಾಕಾಳಿ ಲೈನ್, ವಾರ್ಡ್ ನಂ. 8,10,9 ವೀರಭದ್ರೇಶ್ವರ ಗುಡಿ ಲೈನ್, ಬಸವೇಶ್ವರ ದೇವಸ್ಥಾನ ಲೈನ್, ಕಬಾಡಿ ರೋಡ್, ಚಿದಂಬರ ಓಣಿ, ಕರಿ ಬಸವೇಶ್ವರ ಓಣಿ, ಕಲಬುರ್ಗಿ ಓಣಿ, ಹದ್ದಣ್ಣವರ ಪ್ಲಾಟ್, ಹಣಗಿ ಓಣಿ, ಮಜ್ಜಿಗೆ ಓಣಿ, ಹೆಲ್ತ್ ಕ್ಯಾಂಪ್ ಮಸೂತಿ ಭಾಗ.

ಈಗಾಗಲೇ ಕುಡಿಯುವ ನೀರಿನ ನಳ ಹೊಂದಿರುವ ಬಾಕಿದಾರರ ಪಟ್ಟಿ ತಯಾರಿಸಿದ್ದು, ನಾಗರಿಕರು ಕೂಡಲೇ ತಮ್ಮ ಕುಡಿಯುವ ನೀರಿನ ಬಾಕಿ ಕರವನ್ನು ಸಂದಾಯ ಮಾಡುವಂತೆ ಗದಗ ಬೆಟಗೇರಿ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ರೈತ ಬಾಂಧವರ ಗಮನಕ್ಕೆ

■ ವಿಜಯಸಾಕ್ಷಿ ಸುದ್ದಿ, ಗದಗ

2023–24ನೇ ಸಾಲಿನಲ್ಲಿ ಜಿಲ್ಲೆಯ ಗದಗ, ಮುಂಡರಗಿ, ನರಗುಂದ ಹಾಗೂ ರೋಣ ತಾಲೂಕುಗಳಲ್ಲಿ ಕೃಷಿ ಭಾಗ್ಯ ಯೋಜನೆಯನ್ನು ಮಳೆಯಾಶ್ರಿತ ಕೃಷಿ ನೀತಿ 2014 ರನ್ವಯ ಪ್ಯಾಕೇಜ್ ಮಾದರಿಯಲ್ಲಿ ಅನುಷ್ಠಾನಗೊಳಿಸಲು ಸರ್ಕಾರವು ಆದೇಶ ಹೊರಡಿಸಿದೆ.

ಕೃಷಿ ಭಾಗ್ಯ ಯೋಜನೆಯ ಎಲ್ಲಾ ಘಟಕಗಳನ್ನು (ಕ್ಷೇತ್ರಬದು, ಕೃಷಿಹೊಂಡ, ಪಾಲಿಥೀನ್ ಹೊದಿಕೆ, ಡೀಸೆಲ್ ಪಂಪಸೆಟ್ ಹಾಗೂ ಸೂಕ್ಷ್ಮ ನೀರಾವರಿ ಘಟಕ) ರೈತರು ಅನುಷ್ಠಾನಗೊಳಿಸುವುದು ಕಡ್ಡಾಯವಾಗಿರುತ್ತದೆ. ಅಂತಹ ರೈತರುಗಳನ್ನು ಮಾತ್ರ ತಾಲೂಕಿನಲ್ಲಿ ಕೃಷಿಭಾಗ್ಯ ಯೋಜನೆಯ ಫಲಾನುಭವಿಯಾಗಿ ಆಯ್ಕೆ ಮಾಡಲಾಗುವುದು. ಆಸಕ್ತಿಯುಳ್ಳ ರೈತರು ತಮಗೆ ಸಂಬಂಧಿಸಿದ ರೈತ ಸಂಪರ್ಕ ಕೇಂದ್ರಗಳಲ್ಲಿ ಅರ್ಜಿಗಳನ್ನು ಡಿಸೆಂಬರ್ 25 ರೊಳಗಾಗಿ ಸಲ್ಲಿಸಬೇಕೆಂದು ಜಂಟಿ ಕೃಷಿ ನಿರ್ದೇಶಕರಾದ ಶ್ರೀಮತಿ ತಾರಾಮಣಿ ಜಿ.ಎಚ್. ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಆಕ್ಷೇಪಣೆ ಸಲ್ಲಿಕೆಗೆ ಡಿ. 29 ಕೊನೆಯ ದಿನ

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಜಿಲ್ಲೆಯ ರಾಷ್ಟ್ರೀಯ ಆರೋಗ್ಯ ಅಭಿಯಾನದಡಿಯಲ್ಲಿ ಖಾಲಿಯಿರುವ ಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸಲು ವಿವಿಧ ವೃಂದದ ಹುದ್ದೆಗಳನ್ನು ನೇಮಕಾತಿ ಮಾಡಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿಯಲ್ಲಿ ಅರ್ಜಿ ಆಹ್ವಾನಿಸಲಾಗಿತ್ತು.

ಸದರಿ ಹುದ್ದೆಗಳ ನೇರ ಸಂದರ್ಶನ/ಮೂಲ ದಾಖಲಾತಿ ಪರಿಶೀಲನೆಯನ್ನು ಅಕ್ಟೋಬರ್ 31 ಹಾಗೂ ನವೆಂಬರ್ 7 ರಂದು ಹಮ್ಮಿಕೊಳ್ಳಲಾಗಿತ್ತು, ಸದರಿ ಹುದ್ದೆಗಳ ಮೂಲ ದಾಖಲಾತಿ ಪರಿಶೀಲನೆ ಪಟ್ಟಿಯನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿ ಗದಗ ಇವರ ಕಚೇರಿಯ ಸೂಚನಾ ಫಲಕದಲ್ಲಿ ಲಗತ್ತಿಸಿದೆ, ಸದರಿ ಹುದ್ದೆಗಳ ಮೂಲ ದಾಖಲಾತಿ ಪರಿಶೀಲನೆ ಪಟ್ಟಿಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ರಜಾ ದಿನಗಳನ್ನು ಹೊರತು ಪಡಿಸಿ ಡಿಸೆಂಬರ್ 29 ರ ಸಂಜೆ 4 ಗಂಟೆಯೊಳಗಾಗಿ ಕಚೇರಿ ಸಮಯದಲ್ಲಿ ಲಿಖಿತ ರೂಪದಲ್ಲಿ ಸಲ್ಲಿಸಲು ಸೂಚಿಸಿದೆ. ಹಾಗೂ ಯಾವುದೇ ಆಕ್ಷೇಪಣೆ ಬಾರದೆ ಇದ್ದಲ್ಲಿ ಇದೆ ಪಟ್ಟಿಯನ್ನು ಅಂತಿಮ ಮೂಲ ದಾಖಲಾತಿ ಪರಿಶೀಲನಾ ಪಟ್ಟಿಯೆಂದು ಪರಿಗಣಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

### ಗದುಗಿನಲ್ಲಿ ಕಾಂಗ್ರೆಸ್ ಪಾಳಯದ ವಿರುದ್ಧ ವಾಗ್ದಾಳಿ ನಡೆಸಿದ ಮಾಜಿ ಡಿಸಿಎಂ ಕೆ.ಎಸ್. ಈಶ್ವರಪ್ಪ

# ಕಾಂಗ್ರೆಸ್ ದಲಿತರಿಗೆ ದ್ರೋಹವೆಸಗುತ್ತಲೇ ಬಂದಿದೆ

■ ವಿಜಯಸಾಕ್ಷಿ ಸುದ್ದಿ, ಗದಗ

ಅಯೋಧ್ಯೆಯಲ್ಲಿ ರಾಮ ಮಂದಿರ ಕಟ್ಟಬೇಕು ಎಂಬುದು ಇಂದಿನ ನಿರ್ಧಾರವಲ್ಲ. ಸ್ವಾತಂತ್ರ್ಯ ಪೂರ್ವದಿಂದಲೂ ಹೋರಾಟ ನಡೆಯುತ್ತಲೇ ಬಂದಿದೆ. ಮಥುರಾ, ಕಾಶಿಯಲ್ಲಿ ನಾಶವಾದ ದೇವಾಲಯಗಳನ್ನು ಉಳಿಸಬೇಕೆಂದು ಹೋರಾಟ ಮಾಡಿ ಸ್ವರ್ಗದಲ್ಲಿರುವ ಹೋರಾಟಗಾರರ ಆತ್ಮಕ್ಕೆ ಈಗ ಶಾಂತಿ ಲಭಿಸುವ ಸಂದರ್ಭ ಬಂದಿದೆ. ಜ.22ಕ್ಕೆ ಅಯೋಧ್ಯೆಯೆಡೆ ಇಡೀ ಪ್ರಪಂಚ ನೋಡುವ ಕೆಲಸವಾಗುತ್ತಿದೆ. ಕಾಶಿಯ ಕುರಿತು ನ್ಯಾಯಾಲಯ ತೀರ್ಪು ನೀಡಿದೆ. ಮಥುರಾ ಬಗ್ಗೆ ಸರ್ವೇ ನಡೆಸಲು ಆದೇಶಿಸಿದೆ ಎಂದು ಮಾಜಿ ಉಪಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪ ಹೇಳಿದರು.



ಬುಧವಾರ ಗದುಗಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಭಾರತವನ್ನು ಹಿಂದೂ ರಾಷ್ಟ್ರವನ್ನಾಗಿಸುವುದು ಬಿಜೆಪಿಯ ಅಜೆಂಡಾ ಅಲ್ಲ. ಅದು ಸಮಸ್ತ ಹಿಂದೂಗಳ ಅಜೆಂಡಾ. ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದವರ ರಕ್ತವನ್ನು ಹಂಚಿಕೊಂಡವರು ನಾವು. ನಮ್ಮಲ್ಲಿ ಟಿಪ್ಪುವಿನ ರಕ್ತವಿಲ್ಲ. ಭಾರತ ನಾಳೆ ಹಿಂದೂ ರಾಷ್ಟ್ರವಾಗುತ್ತದೆ ಎಂದು ನಾನು ಹೇಳುವುದಿಲ್ಲ. ಇದು ಎಂದಿಗೂ ಹಿಂದೂ ರಾಷ್ಟ್ರವೇ, ಇದು ಹಿಂದೂ ರಾಷ್ಟ್ರವಾಗಿಯೇ ಇರುತ್ತದೆ ಎಂದರು.

ಇಂಡಿಯಾ ಒಕ್ಕೂಟಕ್ಕೆ ಮಲ್ಲಿಕಾರ್ಜುನ ಖರ್ಗೆ ಪ್ರಧಾನಿ ಅಭ್ಯರ್ಥಿ ಎಂಬ ಪ್ರಸ್ತಾಪವಾದ ಕುರಿತು ಕೆ.ಎಸ್. ಈಶ್ವರಪ್ಪ ಪ್ರತಿಕ್ರಿಯಿಸಿ, ದಲಿತರಿಗೆ ಅವಮಾನ ಮಾಡಲು ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಆ ಸಭೆಯಲ್ಲಿ ಖರ್ಗೆಯವರ ಹೆಸರು ಪ್ರಸ್ತಾಪವಾಗುತ್ತಿದ್ದಂತೆಯೇ ಲಾಲೂ ಪ್ರಸಾದ್ ಹಾಗೂ ನಿತೀಶ್ ಕುಮಾರ್ ಎದ್ದು ಹೋದರು. ಇದಕ್ಕೆ ಇಂಡಿಯಾ ಒಕ್ಕೂಟ ಎಂದು ಕರೆಯುತ್ತೀರಾ? ಇದು ದಲಿತರ ಮೂಗಿಗೆ ತುಪ್ಪ ಒರೆಸುವ ಕೆಲಸವಾಗಿದೆ. ಕಾಂಗ್ರೆಸ್ ಇದೇ ರೀತಿ ದಲಿತರಿಗೆ ದ್ರೋಹ ಮಾಡುತ್ತಲೇ ಬಂದಿದೆ. ದಲಿತರನ್ನು ನಂಬಿಸಿ, ಮೋಸ ಮಾಡಿ ಇಷ್ಟು ವರ್ಷ ದೇಶ ಆಳಿದ್ದಾರೆ. ಪ್ರಿಯಾಂಕ್ ಖರ್ಗೆ ಧರ್ಮದ್ರೋಹಿ. ಆದರೆ, ಕಾಂಗ್ರೆಸ್‌ನ ಹಿರಿಯ ನಾಯಕ ಮಲ್ಲಿಕಾರ್ಜುನ ಖರ್ಗೆಯವರ ಬಗ್ಗೆ ನನಗೆ ಗೌರವವಿದೆ ಎಂದರು.

ಬಿಜೆಪಿ ಸುಳ್ಳಿನ ಕಾರ್ಖಾನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ನೀಡಿದ್ದ ಹೇಳಿಕೆಯ ವಿಚಾರವಾಗಿ ಪ್ರತಿಕ್ರಿಯಿಸಿದ ಈಶ್ವರಪ್ಪ, ಅವರ ಮಾತನ್ನು ಜನ ನಂಬಿದರಾ? ಮೂರು ರಾಜ್ಯಗಳಲ್ಲಿ ಮತದಾರರು ಬಿಜೆಪಿಯನ್ನು ಅಧಿಕಾರಕ್ಕೆ ತಂದರು. ಆ ರಾಜ್ಯಗಳಲ್ಲಿ ಕಾಂಗ್ರೆಸ್ ಪಕ್ಷದ ಪರಿಸ್ಥಿತಿ ಏನಾಗಿದೆ ಈಗ? ಜಿನ್ನಾ ಸಂತತಿಯ ಸಚಿವ ಜಮೀರ್ ಅಹ್ಮದ್, ತೆಲಂಗಾಣದಲ್ಲಿ ಹೇಳಿದ್ದೇನು? ರಾಜ್ಯದಲ್ಲಿ ಎಲ್ಲ ಮುಸ್ಲಿಮರನ್ನೂ ಒಂದುಗೂಡಿಸಿದ್ದೇವೆ, ಮುಸಲ್ಮಾನರನ್ನೇ ಸ್ಪೀಕರ್ ಸ್ಥಾನದಲ್ಲಿ ಕೂರಿಸಿದ್ದೇವೆ, ಎಲ್ಲಾ ಶಾಸಕರೂ ಅವರಿಗೆ ನಮಸ್ಕಾರ ಮಾಡಬೇಕು ಎಂದರು. ಸಿಎಂ ಸಿದ್ದರಾಮಯ್ಯ ಕೂಡ ಇದನ್ನು ಬೆಂಬಲಿಸಿದರು. ನಾವು ಸಭಾಪತಿ ಸ್ಥಾನಕ್ಕೆ ಗೌರವಿಸಿ ನಮಸ್ಕರಿಸುತ್ತೇವೆಯೇ ಹೊರತು, ಆ ಸ್ಥಳದಲ್ಲಿ ಕುಳಿತ ವ್ಯಕ್ತಿಗಲ್ಲ ಎಂದರು.

> ಇತ್ತೀಚೆಗೆ ಸಿಎಂ ಸಿದ್ದರಾಮಯ್ಯ ಪ್ರಧಾನಿ ಮೋದಿಯವರನ್ನು ಭೇಟಿಯಾದ ಸಂದರ್ಭದಲ್ಲಿ ಡಿ.ಕೆ. ಶಿವಕುಮಾರರ ಬಗ್ಗೆ ವಿಚಾರಿಸಿದ ಕುರಿತು ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದ ಈಶ್ವರಪ್ಪ, ಡಿಕೆಶಿಯವರ ಬಗ್ಗೆ ಯಾಕೆ ಪ್ರಸ್ತಾಪವಾಯಿತೋ ನನಗೆ ಗೊತ್ತಿಲ್ಲ. ಎರಡು ವಿಧದಲ್ಲಿ ಪ್ರಖ್ಯಾತಿ ಇರಬೇಕು. ಒಬ್ಬ ಶಿವಾಜಿ ಆಗಿರಬೇಕು, ಅದಿಲ್ಲವಾದರೆ ಅಫ್ಜಲ್ ಖಾನ್ ಆಗಿರಬೇಕು. ಇಬ್ಬರೂ ಪ್ರಖ್ಯಾತಿ ಪಡೆದಿರುವವರೇ. ಆದರೆ, ಒಬ್ಬ ರಾಷ್ಟ್ರಭಕ್ತನಾಗಿದ್ದರೆ, ಇನ್ನೊಬ್ಬ... ಎಂದು ವ್ಯಂಗ್ಯವಾಡಿ ನಿರ್ಗಮಿಸಿದರು.

### ‘ಅಪರಾಧ ತಡೆ ಮಾಸಾಚರಣೆ–2023’ ಕಾರ್ಯಕ್ರಮದಲ್ಲಿ ಎಸ್‌ಪಿ ಬಿ.ಎಸ್. ನೇಮಗೌಡ ಕಿವಿಮಾತು

# ಸಿನಿಮಾ ದೃಶ್ಯಗಳಿಂದ ಪ್ರಭಾವಕ್ಕೊಳಗಾಗಬೇಡಿ

■ ವಿಜಯಸಾಕ್ಷಿ ಸುದ್ದಿ, ಗದಗ

ಇಂದಿನ ವಿದ್ಯಾರ್ಥಿಗಳು ಮಾದಕ ವಸ್ತುಗಳಾದ ಡ್ರಗ್ಸ್, ಗಾಂಜಾ, ಅಫೀಮ್, ಧೂಮಪಾನದಂತಹ ಆರೋಗ್ಯಕ್ಕೆ ಹಾನಿಕರವಾದ ವಸ್ತುಗಳ ಜಾಲ, ಸೇವನೆಯಿಂದ ದೂರವಿರಬೇಕು. ವಿದ್ಯಾರ್ಥಿ ಜೀವನದಲ್ಲಿ ನಿಮ್ಮ ಅಧ್ಯಯನದ ಕಡೆಗೆ ಗಮನ ಕೊಟ್ಟಾಗ ಮಾತ್ರ ನಿಮ್ಮ ಭವಿತವ್ಯ ಸುಖಮಯವಾಗಿರುತ್ತದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್. ನೇಮಗೌಡ ಕಿವಿಮಾತು ಹೇಳಿದರು.

ನಗರದ ಜಗದ್ಗುರು ತೋಂಟದಾರ್ಯ ಮಹಾವಿದ್ಯಾಲಯದ ಆಡಿಟೋರಿಯಂ ಹಾಲ್‌ನಲ್ಲಿ ಗದಗ ಜಿಲ್ಲಾ ಪೊಲೀಸ್ ಇಲಾಖೆಯಿಂದ ಹಮ್ಮಿಕೊಂಡಿದ್ದ ‘ಅಪರಾಧ ತಡೆ ಮಾಸಾಚರಣೆ–2023’ ಕಾರ್ಯಕ್ರಮವನ್ನು ಉದ್ಘಾಟಿಸಿ, ಮಾದಕ ವಸ್ತುಗಳ ಅಪಾಯಗಳ ಕುರಿತು ಮಾತನಾಡಿದರು.

ಗದಗ ಜಿಲ್ಲಾ ಪೊಲೀಸ್ ಸದಾ ನಿಮ್ಮ ಸೇವೆಯಲ್ಲಿ ನಿರತವಾಗಿದೆ. ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಉದ್ದೇಶದಿಂದ ‘ಅಪರಾಧ ತಡೆ ಮಾಸಾಚರಣೆ’ ಜಾಗೃತಿ ಅಭಿಯಾನವು ಜಿಲ್ಲೆಯಲ್ಲಿ ನಡೆಯುತ್ತಿದೆ. ನಿಮ್ಮ ತಂದೆ–ತಾಯಿಗಳು ನಿಮ್ಮ ಶ್ರೇಯೋಭಿವೃದ್ಧಿಗಾಗಿ ಹಗಲಿರುಳು ಶ್ರಮಿಸುತ್ತಿದ್ದಾರೆ. ಅವರ ಕನಸನ್ನು ಭಗ್ನಗೊಳಿಸದೆ ಜಾಣರಾಗಬೇಕೆಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು.



> ಇಂದಿನ ಚಲನಚಿತ್ರಗಳಲ್ಲಿ ನಾಯಕ ನಟರ ದೃಶ್ಯಾವಳಿಗಳನ್ನು ನೋಡಿ, ನೀವು ಅಂತಹ ಕೆಟ್ಟ ಹವ್ಯಾಸಗಳಿಗೆ ಬಲಿಯಾಗಬಾರದು. ಚಲನಚಿತ್ರದ ಆ ದೃಶ್ಯಗಳು ಕೇವಲ ಕಾಲ್ಪನಿಕ. ನಿಜ ಜೀವನದಲ್ಲಿ ನಾಯಕ ನಟರು ತಮ್ಮ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸುತ್ತಾರೆ. ಅವರು ನಟಿಸಿದ ಚಿತ್ರಗಳ ಕಥೆಗಳ ಆಧಾರದ ಮೇಲೆ ಆ ಸನ್ನಿವೇಶಗಳಲ್ಲಿ ಅವರು ನಟಿಸಿರುತ್ತಾರೆ ಎಂಬುದನ್ನು ನೀವು ಅರಿತುಕೊಳ್ಳಬೇಕು.
>
> – ಬಿ.ಎಸ್. ನೇಮಗೌಡ.
>
> ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ. ಗದಗ

ಕಾರ್ಯಕ್ರಮದಲ್ಲಿ ಪ್ರಾಚಾರ್ಯ ಪಿ.ಜಿ. ಪಾಟೀಲ, ಕಾಲೇಜಿನ ಆಡಳಿತಾಧಿಕಾರಿಗಳಾದ ಈಶಣ್ಣ ಮುನವಳ್ಳಿ, ಎಸ್.ಬಿ. ಸಂಶಿಮಠ, ಪಿ.ಐ. ಮುಳುಗುಂದ, ಶ್ರೀ ಶಿವಯೋಗಿ ಬೆಟಗೇರಿ ಬಡಾವಣೆ ಪೊಲೀಸ್ ಠಾಣೆ–ಯ ಮಹಿಳಾ ಪಿಎಸ್‌ಐ ಉಮಾ ಎಚ್.ವಗ್ಗರ್, ವೀರಣ್ಣ ವಿ.ಚೇಗರಡ್ಡಿ, ಮಂಜುನಾಥ್ ಅಸೂಟಿ ಮುಂತಾದವರು ಹಾಜರಿದ್ದರು.

# ಗದಗ ರೆಡ್ ಕ್ರಾಸ್ ಸಂಸ್ಥೆಗೆ ಪ್ರಶಸ್ತಿ



■ ವಿಜಯಸಾಕ್ಷಿ ಸುದ್ದಿ, ಗದಗ

ಕೋವಿಡ್ ಸಾಂಕ್ರಾಮಿಕದ ಸಂದರ್ಭದಲ್ಲಿ ಗದಗ ಜಿಲ್ಲಾ ರೆಡ್ ಕ್ರಾಸ್ ಸಂಸ್ಥೆಯು ಸಂಘಟಿತ ಮತ್ತು ಅಸಂಘಟಿತ ಕಾರ್ಮಿಕರಿಗೆ ಪುನರ್ವಸತಿ, ಆಹಾರ ಆಶ್ರಯಗಳನ್ನು ಕಲ್ಪಿಸಿದ್ದಲ್ಲದೆ, ವಿವಿಧ ಸಂಘ–ಸಂಸ್ಥೆಗಳಿಗೆ ಕೋವಿಡ್ ಜಾಗೃತಿ, ಕೋವಿಡ್‌ನಿಂದ ಮೃತಪಟ್ಟ ವ್ಯಕ್ತಿಗಳ ಶವಸಂಸ್ಕಾರ ಹಾಗೂ ಉಚಿತವಾಗಿ ಪೂರಕ ಕಿಟ್‌ಗಳನ್ನು ವಿತರಿಸಿ, ಸರ್ಕಾರಿ ಆಸ್ಪತ್ರೆಗಳಲ್ಲಿ ಆಕ್ಸಿಜನ್ ವೆಂಟಿಲೇಟರ್‌ಗಳನ್ನು ಉಚಿತವಾಗಿ ಅಳವಡಿಸುವ ಮೂಲಕ ಕೋವಿಡ್ ಸಾಂಕ್ರಾಮಿಕವನ್ನು ಅತ್ಯುತ್ತಮವಾಗಿ ನಿರ್ವಹಿಸಿದ ಹಿನ್ನೆಲೆಯಲ್ಲಿ ವಿಶೇಷ ಪ್ರಶಸ್ತಿಗೆ ಪಾತ್ರವಾಗಿದೆ.

ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಗದಗ ಜಿಲ್ಲಾ ಶಾಖೆ ರಾಜ್ಯಕ್ಕೆ ಮಾದರಿಯಾಗಿ ಸೇವೆ ಸಲ್ಲಿಸಿರುವುದನ್ನು ಪರಿಗಣಿಸಿ ಕರ್ನಾಟಕ ರಾಜ್ಯಪಾಲರಾದ ಥಾವರಚಂದ ಗೆಹ್ಲೋಟ್ ಬೆಂಗಳೂರಿನ ರಾಜಭವನದಲ್ಲಿ ಮಂಗಳವಾರ ನಡೆದ ಭಾರತೀಯ ರೆಡ್ ಕ್ರಾಸ್ ವಾರ್ಷಿಕ ಮಹಾಸಭೆಯಲ್ಲಿ ಪ್ರಶಸ್ತಿ ಪ್ರದಾನ ಮಾಡಿದರು. ಪ್ರಶಸ್ತಿಯನ್ನು ಗದಗ ರೆಡ್ ಕ್ರಾಸ್ ಸಂಸ್ಥೆಯ ಸಭಾಪತಿ ಡಾ. ಆರ್.ಎನ್. ಗೋಡಬೋಲೆ, ಗೌರವ ಕಾರ್ಯದರ್ಶಿ ಡಾ. ಎಂ.ಡಿ. ಸಮುದ್ರಿ ಸ್ವೀಕರಿಸಿದರು.

ಗದಗ ರೆಡ್ ಕ್ರಾಸ್ ಸಂಸ್ಥೆಯ ಅಧ್ಯಕ್ಷರು ಹಾಗೂ ಜಿಲ್ಲಾಧಿಕಾರಿಗಳಾದ ವೈಶಾಲಿ ಎಂ.ಎಲ್. ಅವರು, ಕೋವಿಡ್ ಸಂದರ್ಭದಲ್ಲಿ ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಗದಗ ಶಾಖೆಯು ಜಿಲ್ಲೆಯಾದ್ಯಂತ ಅತ್ಯುತ್ತಮ ಸೇವೆಯನ್ನು ಸಲ್ಲಿಸಿ, ಈ ಪ್ರಶಸ್ತಿಗೆ ಭಾಜನವಾಗಿದ್ದು ಗದಗ ಜಿಲ್ಲೆಗೆ ಹೆಮ್ಮೆ ಹಾಗೂ ಗೌರವವನ್ನು ತಂದಿದೆ ಎಂದು ತಿಳಿಸಿದ್ದಾರೆ.

### ಬಿಜೆಪಿ ಕಾರ್ಯಕರ್ತರ ಸಭೆಯಲ್ಲಿ ಮಾಜಿ ಡಿಸಿಎಂ ಕೆ.ಎಸ್. ಈಶ್ವರಪ್ಪ

# ನಮ್ಮ ಪಕ್ಷಕ್ಕೆ ಕಾರ್ಯಕರ್ತರೇ ಸ್ಫೂರ್ತಿ

■ ವಿಜಯಸಾಕ್ಷಿ ಸುದ್ದಿ, ಮುಂಡರಗಿ

ಚುನಾವಣೆ ಬಂದಾಗ ಮಾತ್ರ ಅಯೋಧ್ಯೆಯಲ್ಲಿ ರಾಮಮಂದಿರ ಕಟ್ಟುತ್ತೇವೆ ಎಂದು ಬಿಜೆಪಿ ಪಕ್ಷದವರು ಹೇಳುತ್ತಾರೆ ಎಂದು ವಿರೋಧಿಗಳು ಟೀಕೆ ಮಾಡುತ್ತಲೇ ಇದ್ದರು. ಅದಕ್ಕೆ ಉತ್ತರವಾಗಿ ಜ.22ರಂದು ರಾಮಮಂದಿರ ಉದ್ಘಾಟನೆಯಾಗಲಿದೆ. ಹಾಗೆಯೇ ಕಾಶಿಯಲ್ಲಿ ವಿಶ್ವನಾಥ, ಮಧುರೈ ದೇವಸ್ಥಾನ ನಿರ್ಮಾಣವೂ ಆಗಿಯೇ ಅಗುತ್ತದೆ ಎಂದು ಮಾಜಿ ಉಪ ಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪ ವಿಶ್ವಾಸ ವ್ಯಕ್ತಪಡಿಸಿದರು.

ತಾಲೂಕಿನ ಜಂತ್ಲಿಶಿರೂರ ಗ್ರಾಮದಲ್ಲಿ ಬುಧವಾರ ಬಿಜೆಪಿ ಮುಖಂಡ ವೆಂಕಟೇಶ ಕುಲಕರ್ಣಿ ಅವರ ನಿವಾಸದ ಆವರಣದಲ್ಲಿ ಬಿಜೆಪಿ ಕಾರ್ಯಕರ್ತರ ಸಭೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಬಿಜೆಪಿಯಲ್ಲಿ ಕಾರ್ಯಕರ್ತರನ್ನು ಗುರುತಿಸಿ, ಗೌರವಿಸಲಾಗುತ್ತದೆ. ಹೀಗಾಗಿ ಲಕ್ಷಾಂತರ ನಾಯಕರು ಪಕ್ಷನಿಷ್ಠೆ ಮತ್ತು ದೇಶಾಭಿಮಾನದಿಂದ ಸಂಘಟನೆಯಲ್ಲಿ ತೆ–ೂಡಗಿದ್ದಾರೆ. ಆದರೆ ವಿಪರ್ಯಾಸವೆಂದರೆ, ಯಾರೋ ಸಂಘಟನೆ ಮಾಡಿದ ಪಕ್ಷದಲ್ಲಿ ಇನ್ಯಾರೋ ಲಾಭ ಮಾಡಿಕೊಂಡಿದ್ದಾರೆ.



ಬರುವ ಲೋಕಸಭಾ ಚುನಾವಣೆಯಲ್ಲಿ ಹಾವೇರಿ ಕ್ಷೇತ್ರದಿಂದ ಕಾಂತೇಶ್ ಅಥವಾ ಇನ್ಯಾರೇ ಇರಲಿ, ಪಕ್ಷ ಟಿಕೆಟ್ ಕೊಟ್ಟವರನ್ನು ಗೆಲ್ಲಿಸಲು ಪ್ರಯತ್ನಿಸುತ್ತೇನೆ. ಕಾರಣ ನಾವೆಲ್ಲ ಪಕ್ಷ, ಕಮಲದಿಂದ ಗುರುತಿಸಿಕೊಂಡಿದ್ದೇವೆಯೇ ಹೊರತು ಯಾವುದೇ ವ್ಯಕ್ತಿ, ಜಾತಿಯಿಂದಲ್ಲ. ಹೀಗಾಗಿ, ನಮ್ಮ ಪಕ್ಷಕ್ಕೆ ಕಾರ್ಯಕರ್ತರೇ ಸ್ಫೂರ್ತಿ ಎಂದರು.

ಮುಂಡರಗಿ ತಾಲೂಕಾ ಬಿಜೆಪಿಯ ಮಾಜಿ ಅಧ್ಯಕ್ಷ ವೆಂಕಟೇಶ ಕುಲಕರ್ಣಿ ಮಾತನಾಡಿ, ಈಶ್ವರಪ್ಪ ಅವರು ಇಡೀ ಕರ್ನಾಟಕ ಸುತ್ತಿ ಬಿಜೆಪಿ ಪಕ್ಷವನ್ನು ಕಟ್ಟಿ ಕಾರ್ಯಕರ್ತರ ಪಡೆಯನ್ನು ನಿರ್ಮಾಣ ಮಾಡಿದ್ದಾರೆ. ಅವರ ಪಕ್ಷನಿಷ್ಠೆ ಇಂದಿಗೂ ಮುಂದುವರೆದಿದ್ದು, ದೇಶದ ಅಖಂಡತೆ, ಏಕತೆಗಾಗಿ ಪ್ರಧಾನಿ ನರೇಂದ್ರ ಮೋದಿಯವರ ಅಗತ್ಯತೆ ದೇಶಕ್ಕಿದೆ. ಅವರ ಬಲ ಹೆಚ್ಚಿಸಲು ಈಶ್ವರಪ್ಪ ಅವರ ಶ್ರಮ ಮತ್ತು ಮಾರ್ಗದರ್ಶನ ಬಿಜೆಪಿಗೆ ಅತ್ಯಗತ್ಯ. ಅವರ ಪುತ್ರ ಕಾಂತೇಶ್ ಹಾವೇರಿ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯಾದರೆ ಪಕ್ಷದ ಕಾರ್ಯಕರ್ತರು ಅವರ ಗೆಲುವಿಗೆ ಶ್ರಮಿಸುತ್ತೇವೆ ಎಂದರು.

ದತ್ತಣ್ಣ ಜೋಶಿ ಮಾತನಾಡಿ, ದೇಶಕ್ಕೆ ಪ್ರಧಾನಿ ನರೇಂದ್ರ ಮೋದಿ ಸಮರ್ಥ ಆಡಳಿತ ನೀಡುತ್ತಿದ್ದಾರೆ. ಭಾರತವೀಗ ವಿಶ್ವದಲ್ಲಿಯೇ ಸದೃಢವಾದ ದೇಶ ಎನಿಸಿಕೊಂಡಿದೆ ಎಂದರು. ಕಾರ್ಯಕ್ರಮದಲ್ಲಿ ಹಾವೇರಿ ಬಿಜೆಪಿ ಲೋಕಸಭಾ ಆಕಾಂಕ್ಷಿ ಅಭ್ಯರ್ಥಿ ಕಾಂತೇಶ್, ಪ್ರಲ್ಹಾದ ಪಾಟೀಲ, ಕೃಷ್ಣಾ ನಾಡಿಗೇರ, ಯಲ್ಲಪ್ಪ ಮದಗಣ್ಣವರ, ಚಿನ್ನಪ್ಪ ವಡ್ಡಟ್ಟಿ, ಪ್ರಕಾಶ ಸಂಕಣ್ಣವರ, ಸಿದ್ದಣ್ಣ ವಡ್ಡಟ್ಟಿ, ಯಲ್ಲಪ್ಪ ಬಳೂಟಗಿ, ಪರಶುರಾಮ ಕರಡಿಕೊಳ್ಳ, ಶ್ರೀಕಾಂತ ಚವಡಿ, ವಿಜಯ ಕೋಳೇಕಾರ, ಸಿದ್ದೇಶ ಜಂಬಾಳಿ ಇತರರು ಪಾಲ್ಗೊಂಡಿದ್ದರು. ಬಡಿಗೇರ ನಿರೂಪಿಸಿದರು.

> ದೇಶದಲ್ಲಿ 75 ವರ್ಷಗಳ ಕಾಲ ಆಳಿದ ಪಕ್ಷ ಯಾವುದೇ ಅಭಿವೃದ್ಧಿ ಸಾಧಿಸಲಿಲ್ಲ. ಕೇವಲ 9 ವರ್ಷಗಳ ಅವಧಿಯಲ್ಲಿ ಪ್ರಧಾನಿಯಾಗಿ ನರೇಂದ್ರ ಮೋದಿ ದೇಶದ ಸಂಸ್ಕೃತಿ, ಧರ್ಮ ಉಳಿಸುವುದಷ್ಟೇ ಅಲ್ಲದೆ, ಸದೃಢ ಭಾರತ ಕಟ್ಟುವಲ್ಲಿ ಯಶಸ್ವಿಯಾಗಿದ್ದಾರೆ. ಹೀಗಾಗಿ ಮೋದಿ ಮತ್ತೊಮ್ಮೆ ಪ್ರಧಾನಿಯಾಗಲಿದ್ದಾರೆ. ದೇಶದ ಸ್ವಾತಂತ್ರ್ಯಕ್ಕಾಗಿ ಅನೇಕ ಮಹನೀಯರು ಪ್ರಾಣತ್ಯಾಗ ಮಾಡಿದರು. ನಮ್ಮ ಧರ್ಮ, ಸಂಸ್ಕೃತಿ ಉಳಿಸುವ ಜವಾಬ್ದಾರಿ ಇಂದಿನ ಯುವಕರ ಮೇಲಿದೆ ಎಂದು ಕೆ.ಎಸ್. ಈಶ್ವರಪ್ಪ ಹೇಳಿದರು.

## ಸಂಪಾದಕೀಯ

# ಖರ್ಗೆ ಪ್ರಧಾನಿ ಅಭ್ಯರ್ಥಿ; ಮೈತ್ರಿಕೂಟದ ಹಗಲುಗನಸು

ಲೋಕಸಭಾ ಚುನಾವಣೆಗೆ ಇನ್ನು ಕೆಲ ತಿಂಗಳು ಬಾಕಿ ಇದ್ದರೂ ಆಡಳಿತಾರೂಢ ಬಿಜೆಪಿ ಈಗಾಗಲೇ ಚುನಾವಣಾ ತಯಾರಿಯನ್ನ ಆರಂಭಿಸಿದೆ. ಕೇಂದ್ರ ಸರ್ಕಾರದ ಯೋಜನೆಗಳನ್ನ ಮನೆಮನೆಗಳಿಗೆ ತಲುಪಿಸುವ ವಿಕಸಿತ ಸಂಕಲ್ಪ ಯಾತ್ರೆ ಮೂಲಕ ಮತ ಬ್ಯಾಂಕನ್ನು ಗಟ್ಟಿ ಮಾಡಿಕೊಳ್ಳುತ್ತಿದೆ.

ಮತ್ತೊಂದೆಡೆ ಪಾಕ್ ಆಕ್ರಮಿತ ಕಾಶ್ಮೀರವನ್ನು ಮರಳಿ ಪಡೆಯುವ, ರಾಮಮಂದಿರ ನಿರ್ಮಾಣ, ಪೌರತ್ವ ತಿದ್ದುಪಡಿ ಕಾಯ್ದೆ ಹೀಗೆ ಅನೇಕ ಭಾವನಾತ್ಮಕ ವಿಷಯಗಳನ್ನ ಇಟ್ಟುಕೊಂಡು ಬಿಜೆಪಿ ಸದ್ದಿಲ್ಲದೇ ಚುನಾವಣಾ ಕಾರ್ಯತಂತ್ರವನ್ನ ರೂಪಿಸುತ್ತಿದೆ.

ದೇಶಾದ್ಯಂತ ಈಗ ವಿಕಸಿತ ಸಂಕಲ್ಪ ಯಾತ್ರೆ ನಡೆಯುತ್ತಿದೆ. ಅದಾದ ನಂತರ ಜನವರಿ 22ರಂದು ರಾಮ ಮಂದಿರ ಉದ್ಘಾಟನೆ, ಫೆಬ್ರವರಿ ಮೊದಲ ವಾರದಲ್ಲಿ ಕೇಂದ್ರದ ಬಜೆಟ್ ಮಂಡನೆ. ಹೀಗೆ ಬಿಜೆಪಿ ಸಾಲು ಸಾಲು ಕಾರ್ಯಕ್ರಮಗಳ ಮೂಲಕ ಜನರನ್ನ ಹಿಡಿದಿಡುವ, ಜನರ ಮನಸ್ಸನ್ನು ತನ್ನತ್ತ ಆಕರ್ಷಿಸುವಂತಹ ಎಲ್ಲ ಪ್ರಯತ್ನಗಳನ್ನ ಸಾಕಷ್ಟು ವ್ಯವಸ್ಥಿತವಾಗಿ ಮಾಡುತ್ತಿದೆ.

ಆದರೆ ಪ್ರತಿಪಕ್ಷ ಕಾಂಗ್ರೆಸ್ ಮಾತ್ರ ಹಗಲುಗನಸು ಕಾಣುವುದರಲ್ಲಿ ನಿರತವಾಗಿದೆ. ಇಂಡಿಯಾ ಮೈತ್ರಿಕೂಟವು ಅದಕ್ಕೆ ಹೊರತಾಗಿಲ್ಲ. ಲೋಕಸಭೆ ಚುನಾವಣೆಯನ್ನು ಎದುರಿಸುವ ರೀತಿ ನೀತಿಗಳ ಬದಲಾಗಿ ಪ್ರಧಾನಿ ಅಭ್ಯರ್ಥಿ ಯಾರು ಎನ್ನುವುದೇ ಮೈತ್ರಿಕೂಟದ ಪಕ್ಷಗಳಿಗೆ ಮುಖ್ಯವಾದಂತಾಗಿದೆ.

ಪ್ರಧಾನಿ ಅಭ್ಯರ್ಥಿ ಘೋಷಣೆ ಲೋಕಸಭಾ ಚುನಾವಣೆಯ ಎದುರಿಸುವ ತಂತ್ರಗಳಲ್ಲಿ ಒಂದು ಅಂಶ ಇರಬಹುದು. ಆದರೆ ಪಕ್ಷ ಸಂಘಟನೆ, ಮೈತ್ರಿಕೂಟದ ಬಲವರ್ಧನೆ ಆಗದೆ ಪ್ರಧಾನಿ ಅಭ್ಯರ್ಥಿ ಆಯ್ಕೆಗೆ ಮೊದಲ ಆದ್ಯತೆಯೇ ನೀಡಿದಲ್ಲಿ ಮೈತ್ರಿಕೂಟದಲ್ಲಿ ಬಿರುಕು ಮೂಡುವುದು ಸಹಜ.

ಮೈತ್ರಿಕೂಟದ ಸಭೆಯಲ್ಲಿ ಖರ್ಗೆ ಹೆಸರು ಪ್ರಸ್ತಾಪಕ್ಕೆ ಲಾಲು ಪ್ರಸಾದ್ ಯಾದವ್ ಮತ್ತು ನಿತೀಶ್ ಕುಮಾರ್ ಸಹಮತ ವ್ಯಕ್ತಪಡಿಸದೆ ಸಭೆಯಿಂದ ಹೊರ ಹೋಗಿದ್ದು ಈಗ ಚರ್ಚೆಗೆ ಕಾರಣವಾಗಿದೆ.

ಮೈತ್ರಿ ಕೂಟದಲ್ಲಿ ಇಂತಹ ಹತ್ತು ಹಲವಾರು ಸವಾಲುಗಳು ಎದುರಾಗುತ್ತವೆ. ಅವುಗಳನ್ನ ಎದುರಿಸಬೇಕಾದರೆ ಮೈತ್ರಿಕೂಟ ಗಟ್ಟಿಗೊಳ್ಳಬೇಕು. ಮೈತ್ರಿಕೂಟದ ಪಕ್ಷಗಳಲ್ಲಿ ಸೀಟು ಹೊಂದಾಣಿಕೆಯಾಗಬೇಕು. ಸಾಕಷ್ಟು ಮುಂಚಿತವಾಗಿ ಅಭ್ಯರ್ಥಿಗಳ ಘೋಷಣೆ ಆಗಬೇಕು. ಮಿತ್ರ ಪಕ್ಷಗಳು ಒಗ್ಗಟ್ಟಿನಿಂದ ಆಯಾ ಅಭ್ಯರ್ಥಿಗಳ ಪರ ಕೆಲಸ ಮಾಡಬೇಕು.

ಯಾವಾಗ ದೇಶದಲ್ಲಿ ಮೈತ್ರಿಕೂಟದ ಪರ ಅಲೆ ಸೃಷ್ಟಿಯಾಗುತ್ತೊ ಆಗ ಪ್ರಧಾನಿ ಅಭ್ಯರ್ಥಿ ಬಗ್ಗೆ ಚಿಂತನೆ ಮಾಡಬೇಕು. ಈಗಲೇ ಪ್ರಧಾನಿ ಅಭ್ಯರ್ಥಿ ಘೋಷಿಸಿ, ಕೆಲ ತಿಂಗಳಲ್ಲಿ ಮೈತ್ರಿಕೂಟ ಮುರಿದು ಬಿದ್ದರೆ ಮತ್ತಷ್ಟು ಅಪಮಾನ, ಅವಮಾನಕ್ಕೆ ಈಡಾಗಬೇಕಾಗುತ್ತದೆ. ಸುಧೀರ್ಘ ರಾಜಕೀಯ ಅನುಭವ ಹೊಂದಿರುವ ಮಲ್ಲಿಕಾರ್ಜುನ್ ಖರ್ಗೆ, ಸದ್ಯ ಮೈತ್ರಿಕೂಟ ಬಲಗೊಳ್ಳುವತ್ತ ಗಮನಹರಿಸಲಿ.

# ಡಿ.25ರಂದು ಸುವರ್ಣ ಕರ್ನಾಟಕ ಸಾಂಸ್ಕೃತಿಕ ಸಂಭ್ರಮ

■ವಿಜಯಸಾಕ್ಷಿ ಸುದ್ದಿ, ಕೊಪ್ಪಳ



ಶ್ರೀ ಕ್ಷೇತ್ರ ಮಂತ್ರಾಲಯದಲ್ಲಿ ಕುಕನೂರಿನ ಕನ್ನಡ ಸಾಹಿತ್ಯ ಸಂಸ್ಕೃತಿ ಅಭಿವೃದ್ಧಿ ಸಂಸ್ಥೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ವತಿಯಿಂದ ಸುವರ್ಣ ಕರ್ನಾಟಕ ಸಂಭ್ರಮಾಚರಣೆ ನಿಮಿತ್ತ ಕನ್ನಡ ಹಬ್ಬ, ವಿಚಾರ ಸಂಕಿರಣ, ಭಕ್ತಿ ಸಂಗೀತ, 'ಕವಿಗಳು ಕಂಡಂತೆ ಶ್ರೀಗುರು ರಾಘವೇಂದ್ರ ರಾಯರು' ಕವಿಗೋಷ್ಠಿ, ನೃತ್ಯ, ಜಾನಪದ ಗಾಯನ ಹೀಗೆ ಹಲವು ಕಾರ್ಯಕ್ರಮಗಳು ಹಾಗೂ ಸಾಧಕರಿಗೆ ಸನ್ಮಾನ ಸಮಾರಂಭವನ್ನು ಡಿ.25ರಂದು ಆಯೋಜಿಸಲಾಗಿದೆ.

ಭಾಗವಹಿಸುವ ಆಸಕ್ತರು ಕೂಡಲೇ ತಮ್ಮ ಹೆಸರನ್ನು ಸಂಸ್ಥೆಯ ಅಧ್ಯಕ್ಷರು ಹಾಗೂ ಪತ್ರಕರ್ತರಾದ ರುದ್ರಪ್ಪ ಭಂಡಾರಿ ಮೊಬೈಲ್: 7815985505 ಇವರಲ್ಲಿ ನೋಂದಾಯಿಸಬಹುದು ಎಂದು ಸಂಚಾಲಕರಾದ ಎಚ್.ಆರ್. ವಸ್ತ್ರದ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮಕ್ಕಳ ಕಥೆ


# ಕಮಲಾಪುರ ಅನಾಥ ರಾಮಣ್ಣನ ಶೈಲಿ

ಕಮಲಾಪೂರದಲ್ಲಿ ಅನಾಥ ವೃದ್ಧರಾದ ರಾಮಣ್ಣ ಮತ್ತು ಡಂಕಣ್ಣ ಎನ್ನುವ ಆತ್ಮೀಯ ಗೆಳೆಯರಿದ್ದರು. ವೃದ್ಧಾಪ್ಯದಲ್ಲಿ ತಮ್ಮಷ್ಟಕ್ಕೆ ತಾವು ಒಬ್ಬರಿಗೊಬ್ಬರು ಸಹಾಯ-ಸಹಕಾರದಿಂದ ಬದುಕುತ್ತಿದ್ದರು. ಅವರಿಗೆ ಇರಲು ನೆಲೆಯಿರಲಿಲ್ಲ. ರಾಮಣ್ಣನ ಮಕ್ಕಳು ಇದ್ದರಾದರೂ ಮನೆಯೊಳಗೆ ಸೇರಿಸಿಕೊಳ್ಳುತ್ತಿರಲಿಲ್ಲ. ಡಂಕಣ್ಣನ ಮಕ್ಕಳು ಮನೆಯಿಂದ ಹೊರಗೆ ಹಾಕಿದ್ದರು. ಇದರಿಂದ ಇಬ್ಬರೂ ಕೂಡಿಕೊಂಡು ಹಗಲೆಲ್ಲ ದೇವಸ್ಥಾನದಲ್ಲಿ ಭಕ್ತರು, ದಾನಿಗಳು ಕೊಡುವ ಆಹಾರವನ್ನು ತಿಂದುಂಡು ಬದುಕುತ್ತಿದ್ದರು. ರಾತ್ರಿಯಾದರೆ ಒಂದು ದೇವಸ್ಥಾನದಲ್ಲಿ ಕೂಡುತ್ತಿದ್ದರು.

ಅಂದು ಶುಕ್ರವಾರ ಇರುವುದರಿಂದ ಹೊರಗೆ ಎಲ್ಲೂ ಹೋಗದೆ ದೇವಸ್ಥಾನದಲ್ಲಿಯೇ ಇದ್ದರು. ಬರುವ ಭಕ್ತರು ಏನಾದರೂ ಸಹಾಯ ಮಾಡುತ್ತಾರೆ, ಹೆಚ್ಚಿನ ಸಹಾಯ ಸಿಗುತ್ತದೆ ಎಂದು. ಸಂಜೆಯಾಗುತ್ತಲೇ ತಿನ್ನಲಿಕ್ಕೆ ಆಹಾರ, ಹೊಟ್ಟೆ ತುಂಬವಷ್ಟು ಅನ್ನ ಸಿಕ್ಕಿತು. ಹಾಗೆಯೇ ಭಕ್ತರಿಂದ ಕಾಣಿಕೆಯೂ ಸಹ ರಾಮಣ್ಣನಿಗೆ ಒಂದು ನೂರು ರೂಪಾಯಿ ಬಂದರೆ, ಡಂಕಣ್ಣನಿಗೆ ನೂರಾ ಹತ್ತು ರೂಪಾಯಿ ಬಂದಿತು

'ಈ ನೂರಾ ಹತ್ತು ರೂಪಾಯಿಯಿಂದ ಜೀವನ ಹೇಗೆ ಕಳೆಯಬೇಕೆಂದು ತಿಳಿಯುತ್ತಿಲ್ಲ ರಾಮಣ್ಣ' ಎಂದ ಡಂಕಣ್ಣ. ನಾಳೆಗೆ ನಾಳೆ ನೋಡಿದರಾಯಿತು, ಇವತ್ತು ಆ ದೇವರು ನಮಗೆ ಹೊಟ್ಟೆ ತುಂಬ ಅನ್ನ ಕೊಟ್ಟಿದ್ದಾನೆ. ಮೇಲಾಗಿ ನೂರು ರೂಪಾಯಿ ಹಣ ಬೇರೆ... ಇನ್ನೇನು ಬೇಕು.

ಇಷ್ಟಾದರೆ ಸಾಕಾಗುತ್ತಾ.. ನಾಳೆಗೆ ಮತ್ತೆ ಚಿಂತೆ, ಹಸಿವು, ನೋವು ಅನುಭವಿಸಬೇಕು, ಎಂದ ಡಂಕಣ್ಣ. ಆಯಿತು ಅದಕ್ಕೆ ಒಂದು ಪರಿಹಾರ ಹುಡುಕೋಣ ಬಿಡು..ಏನು ಪರಿಹಾರ ಮತ್ತೆ ಹುಡುಕು..! ಎಂದಾಗ ರಾಮಣ್ಣನಿಗೆ ತಕ್ಷಣ ಒಂದು ಉಪಾಯ ಹೊಳೆಯಿತು.



ನೂರು ರೂಪಾಯಿಯು ಉಳಿಯಬೇಕು, ನಿತ್ಯ ಹೊಟ್ಟೆ ತುಂಬ ಅನ್ನವೂ ಬೇಕು. ಅಂತಹ ಉಪಾಯ ಹೇಳುತ್ತೇನೆ ಕೇಳು, ಒಂದು ನೂರು ರೂಪಾಯಿಗೆ ಹೊಸ ಪೆನ್ನುಗಳನ್ನು ತೆಗೆದುಕೊಳ್ಳೋಣ. ಅದರಲ್ಲಿ ಇಪ್ಪತ್ತು ಪೆನ್ನುಗಳಿರುತ್ತವೆ. ಅದನ್ನೆಲ್ಲ ಮಾರಿದರೆ ಇಪ್ಪತ್ತು ರೂಪಾಯಿ ಸಿಗುತ್ತದೆ. ಒಂದು ವಾರ ನೀನು ಒಂದು ಶಾಲೆಯ ಮುಂದೆ ಮಾರಾಟ ಮಾಡು, ನಾನು ಮತ್ತೊಂದು ಶಾಲೆಯ ಮುಂದೆ ಮಾರಾಟ ಮಾಡುತ್ತೇನೆ.

ಒಂದು ವಾರ ನಾವು ಹೊಟ್ಟೆ ತುಂಬ ತಿಂದುಂಡು ಮತ್ತೆ ಒಂದು ನೂರು ರೂಪಾಯಿ ಉಳಿಯಬೇಕು, ಏನಂತೀಯಾ.. ಎಂದ ರಾಮಣ್ಣ, ಅದಕ್ಕೆ ಡಂಕಣ್ಣನು ಹೂಂ... ಎಂದ.

ಮರುದಿನ ರಾಮಣ್ಣ ಒಂದು ಶಾಲೆಯ ಮುಂದೆ ಇಪ್ಪತ್ತು ಪೆನ್ನುಗಳನ್ನು ಇಟ್ಟುಕೊಂಡು ಕುಳಿತ. ಸಂಜೆಯಾಗುತ್ತಲೇ ಎಲ್ಲ ಪೆನ್ನುಗಳು ಮಾರಾಟವಾಗಿದ್ದವು. ಅದರಂತೆ ಡಂಕಣ್ಣನಿಗೂ ಎಲ್ಲ ಪೆನ್ನುಗಳು ಮಾರಾಟವಾದವು. ಹೀಗೆಯೇ ಮೂರ್‍ನಾಲ್ಕು ದಿನಗಳವರೆಗೆ ನಡೆಯಿತು. ಅತಿ ಆಸೆ ಮತ್ತು ಹಸಿವು ತಾಳಲಾರದೆ ಡಂಕಣ್ಣ ಆ ನೂರು ರೂಪಾಯಿಯೊಳಗೆ ಹತ್ತು-ಇಪ್ಪತ್ತು ರೂಪಾಯಿ ಖರ್ಚು ಮಾಡಿದ. ಪೆನ್ನುಗಳು ಕಡಿಮೆ ಆದವು, ಲಾಭವೂ ಕಡಿಮೆ ಆಯಿತು. ಮತ್ತೆ ಅದರಿಂದ ಹಸಿವು ಹೆಚ್ಚಾಯಿತು, ವಾರದ ಕೊನೆಗೊಂದು ದಿನ ಬರಿಗೈಯಲ್ಲಿ ಡಂಕಣ್ಣ ರಾಮಣ್ಣನನ್ನು ಭೇಟಿಯಾದ.

ನೀನು ಎಲ್ಲ ಹಣ ಖರ್ಚು ಮಾಡಿದಿಯಲ್ಲ..! ಎಂದ. ಆಗ ರಾಮಣ್ಣ, ಎರಡು ನೂರು ರೂಪಾಯಿ ತೋರಿಸಿದ, ನನಗೆ ಲಾಭ ಬಹಳ ಆಯಿತು. ಹಾಗಂತ ನಾನು ದುಂದುವೆಚ್ಚ ಮಾಡಲಿಲ್ಲ. ದಿನವೂ ಇಪ್ಪತ್ತು ರೂಪಾಯಿ ಉಳಿಯುತ್ತಿತ್ತು, ಒಂದೊಂದು ಸಲ ಮಕ್ಕಳು ತಮಗೆ ಉಳಿದ ಅನ್ನವನ್ನು ಕೊಡುತ್ತಿದ್ದರು.

ಅದನ್ನೇ ತಿಂದು ಇಪ್ಪತ್ತು ರೂಪಾಯಿ ಉಳಿಸುತ್ತಿದ್ದೆ. ನಾವು ನಮ್ಮ ಸ್ಥಿತಿ-ಗತಿಗಳನ್ನು ಅರಿತುಕೊಂಡು ನಡೆಯಬೇಕು. ಅತಿ ಆಸೆಗೆ ಬಲಿಯಾದರೆ ನಮ್ಮಲ್ಲಿ ಏನೂ ಉಳಿಯುವುದಿಲ್ಲ. ಯಾರೂ ಪ್ರತೀ ಬಾರಿಯೂ ಸಹಾಯ ಮಾಡುವುದಿಲ್ಲ. ನಾನು ಎಂಟು ದಿನ ಹೊಟ್ಟೆ ತುಂಬ ತಿಂದುಂಡು ಬದುಕಿದೆ. ಮೇಲಾಗಿ ನೂರಕ್ಕೆ ಎರಡು ನೂರು ರೂಪಾಯಿಯೂ ಉಳಿಸಿಕೊಂಡೆ ಎಂದ ರಾಮಣ್ಣ. ಡಂಕಣ್ಣ ತನ್ನಿಂದ ತಪ್ಪಾಯಿತೆಂದು ಕ್ಷಮೆ ಕೇಳಿದ.

ನೀತಿ: ನಮ್ಮ ಸ್ಥಿತಿ-ಗತಿಗಳೇ ನಮ್ಮ ಜೀವನದ ಪಾಠ.

**– ಡಾ. ತಯಬಅಲಿ. ಅ. ಹೊಂಬಳ, ಗದಗ.**

## ಅನಿರ್ದಿಷ್ಟಾವಧಿ ಪ್ರತಿಭಟನೆ

# ರಕ್ತದಲ್ಲಿ ಪತ್ರ ಬರೆದ ಅತಿಥಿ ಉಪನ್ಯಾಸಕರು!

■ ಸರಕಾರದ ಗಮನ ಸೆಳೆಯಲು ವಿಭಿನ್ನ ಹೋರಾಟ ■ ಸೇವಾ ಕಾಯಮಾತಿಗೆ ನಿಲ್ಲದ ಆಗ್ರಹ

■ವಿಜಯಸಾಕ್ಷಿ ಸುದ್ದಿ, ಕೊಪ್ಪಳ

ಸುಮಾರು ವರ್ಷಗಳಿಂದ ಅತಿಥಿ ಉಪನ್ಯಾಸಕರಾಗಿ ಕಾರ್ಯ ನಿರ್ವಹಿಸುತ್ತಿರುವ ತಮ್ಮ ಸೇವೆಯನ್ನು ಕಾಯಂಗೊಳಿಸಬೇಕು ಎಂದು ಆಗ್ರಹಿಸಿ ಅತಿಥಿ ಉಪನ್ಯಾಸಕರು ನಡೆಸುತ್ತಿರುವ ಹೋರಾಟ 28ನೇ ದಿನಕ್ಕೆ ಕಾಲಿಟ್ಟಿದೆ. ಪ್ರತಿಭಟನೆ ಆರಂಭಗೊಂಡು ಇಷ್ಟು ದಿನಗಳಾದರೂ ಸರಕಾರದಿಂದ ಸ್ಪಂದನೆ ದೊರಕದ ಹಿನ್ನಲೆಯಲ್ಲಿ ಕೊಪ್ಪಳದ ಅತಿಥಿ ಉಪನ್ಯಾಸಕರು ವಿಭಿನ್ನ ಹೋರಾಟಕ್ಕೆ ಬುಧವಾರ ಸಾಕ್ಷಿಯಾದರು.

ನಗರದ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಅತಿಥಿ ಉಪನ್ಯಾಸಕರು, ಬೇಡಿಕೆ ಈಡೇರಿಸುವಂತೆ ಆಗ್ರಹಿಸಿ ನಡೆಸುತ್ತಿರುವ ಹೋರಾಟ ರಾಜ್ಯದ್ಯಂತ ಮಾದರಿಯಾಗಿದೆ. ಬುಧವಾರ ತಮ್ಮ ರಕ್ತದಲ್ಲಿ ಪತ್ರ ಬರೆದು ಸರಕಾರಕ್ಕೆ ನಿವೇದಿಸಿಕೊಳ್ಳುವ ಮೂಲಕ ಕ್ರಾಂತಿ ಸೃಷ್ಟಿಸಿದರು.

ಈಗಾಗಲೇ ಪಾದಯಾತ್ರೆ ಮಾಡಿ ಸರಕಾರಕ್ಕೆ ಮನವಿ ಸಲ್ಲಿಸಲಾಗಿದೆ. ಪತ್ರ ಚಳವಳಿ ನಡೆಸಲಾಗಿದೆ. ಕಣ್ಣಿಗೆ ಕಪ್ಪುಪಟ್ಟಿ ಕಟ್ಟಿಕೊಂಡು ಪ್ರತಿಭಟನೆ ನಡೆಸಿದ್ದಾಗಿದೆ. ಇಷ್ಟಾದರೂ ಸರಕಾರದ ಮೌನ ಅತಿಥಿ ಉಪನ್ಯಾಸಕರ ಹೋರಾಟವನ್ನು ತೀವ್ರಗೊಳ್ಳುವಂತೆ ಮಾಡಿದ್ದು, ಇದೀಗ ಪ್ರತಿಭಟನಾನಿರತ ಅತಿಥಿ ಉಪನ್ಯಾಸಕರು ಎಲ್ಲ ಮುಂಜಾಗ್ರತಾ ಕ್ರಮಗಳೊಂದಿಗೆ ತಮ್ಮ ರಕ್ತದಲ್ಲಿ ಸರಕಾರಕ್ಕೆ ಪತ್ರ ಬರೆದು ಬೇಡಿಕೆ ಈಡೇರಿಸುವಂತೆ ಮುಖ್ಯಮಂತ್ರಿ ಹಾಗೂ ಉನ್ನತ ಶಿಕ್ಷಣ ಇಲಾಖೆಯ ಸಚಿವರಿಗೆ ಮನವಿ ಸಲ್ಲಿಸಿದರು.

ಹೋರಾಟದಲ್ಲಿ ವಿಜಯಕುಮಾರ್ ಕುಲಕರ್ಣಿ, ಲತಾ, ಡಾ.ವೀರಣ್ಣ ಸಜ್ಜನರ್, ಬಸವರಾಜ ಕರುಗಲ್ ರಕ್ತದಲ್ಲಿ ಪತ್ರ ಬರೆದರು. ಈ ವೇಳೆ ಡಾ.ಸಣ್ಣದೇವೇಂದ್ರಸ್ವಾಮಿ, ಡಾ.ಪ್ರಕಾಶ ಬಳ್ಳಾರಿ, ಡಾ.ತುಕಾರಾಂ ನಾಯಕ, ಶಿವಮೂರ್ತಿಸ್ವಾಮಿ, ಕಲ್ಲಯ್ಯ, ಗೀತಾ ಬನ್ನಿಕೊಪ್ಪ, ಅಕ್ಕಮಹಾದೇವಿ, ಸಾವಿತ್ರಿ, ಗಿರಿಜಾ ತುರಮುರಿ, ಎಂ.ಶಿವಣ್ಣ, ಮಹಾಂತೇಶ ನೆಲಾಗಣಿ, ಶಿವಬಸಪ್ಪ ಮಸ್ಕಿ, ರಾಮಪ್ರಸಾದ, ಸಿ.ಬಸವರಾಜ, ವಿಜಯಕುಮಾರ ತೋಟದ, ಬಸವರಾಜ ಹುಳಕಣ್ಣವರ್, ಪ್ರಕಾಶ ಜಡಿಯವರ್, ಈಶಪ್ಪ ಮೇಟಿ ಸೇರಿದಂತೆ ಹಲವರಿದ್ದರು.



ಹಲವು ವರ್ಷಗಳಿಂದ ನಾವು ಅತಿಥಿ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿದ್ದೇವೆ. ಇದುವರೆಗೂ ನಮಗೆ ಯಾವುದೇ ಭದ್ರತೆ ಇಲ್ಲ. ವರ್ಷದಲ್ಲಿ ಹತ್ತು ತಿಂಗಳು ಮಾತ್ರ ಸಂಬಳ ನೀಡುತ್ತಿರುವ ಸರಕಾರ, ಅದನ್ನು ಸರಿಯಾಗಿ ನೀಡುತ್ತಿಲ್ಲ. ವಯೋಮಿತಿ ಮೀರುತ್ತಿದೆ. ಸರಕಾರ ಕೂಡಲೇ ನಮ್ಮ ಸೇವೆ ಕಾಯಂಗೊಳಿಸಬೇಕು."

**–ಲತಾ, ಅತಿಥಿ ಉಪನ್ಯಾಸಕಿ, ಇಂಗ್ಲಿಷ್ ವಿಭಾಗ, ಸರಕಾರಿ ಪ್ರಥಮ ದರ್ಜೆ ಕಾಲೇಜು, ಕೊಪ್ಪಳ.**

### ಪತ್ರದ ಸಾರ

**ನಂಬಿಕೆಯ ಸರಕಾರಕ್ಕೆ ರಕ್ತದ ಪ್ರೀತಿ ಪತ್ರ**

ಮಾನ್ಯ ಮುಖ್ಯಮಂತ್ರಿಗಳೇ/ಉನ್ನತ ಶಿಕ್ಷಣ ಸಚಿವರೇ, ಅತಿಥಿ ಉಪನ್ಯಾಸಕರಾಗಿರುವ ನಮ್ಮ ಸೇವೆಯನ್ನು ಕಾಯಂಗೊಳಿಸಿ ಎಂದು 28 ದಿನಗಳಿಂದ ಗೋಗರೆಯುತ್ತಿದ್ದೇವೆ. ಸರಕಾರ ಸಹ ಸ್ಪಂದಿಸುತ್ತಿದೆ ಎಂಬ ಆಶಾವಾದ ಇನ್ನೂ ಇದೆ. ಆದರೆ ಅಧಿಕೃತ ಮಾಹಿತಿಯನ್ನು ಈವರೆಗೂ ನೀವು ಹೇಳಿಲ್ಲ, ನಾವು ಕೇಳಿಲ್ಲ. ಹಾಗಾಗಿ ಪ್ರೀತಿಪಾತ್ರರಿಗೆ ಬರೆಯುವಂತೆ ನಾವು ಸಹ ಸರಕಾರಕ್ಕೆ ರಕ್ತದಿಂದ ಈ ಪತ್ರ ಬರೆಯುತ್ತಿದ್ದೇವೆ.

ಇಚ್ಛಾಶಕ್ತಿ ಇದ್ದರೆ ಸರಕಾರಕ್ಕೆ ಯಾವುದೂ ಸಮಸ್ಯೆಯಲ್ಲ, ಹೊರೆಯೂ ಅಲ್ಲ, ವಯೋಮಿತಿಯ ಅಂತ್ಯದಲ್ಲಿದ್ದೇವೆ. ಅಭದ್ರತೆಯಿಂದ ಎಷ್ಟೋ ಜೀವಗಳು ಕೊನೆಯುಸಿರೆಳೆದಿವೆ. ಇಂಥ ಹಲವು ಸಮಸ್ಯೆಗಳನ್ನು ಎದುರಿಸುತ್ತಲೇ ಬದುಕು ಕಟ್ಟಿಕೊಳ್ಳಲು ಹೆಣಗಾಡುತ್ತಿದ್ದೇವೆ.

ನಮ್ಮ ಬೇಡಿಕೆಯೊಂದೇ; ಸೇವೆ ಕಾಯಂ ಮಾಡಿ-ನ್ಯಾಯ ಕೊಡಿ, ರಕ್ತ ಕೊಟ್ಟೇವು- ಕಾಯಂ ಬಿಡೇವು...

ಜನಮನ್ನಣೆಯ ಸರಕಾರ ಅತಿಥಿ ಉಪನ್ಯಾಸಕರ ಸಮಸ್ಯೆ ನಿವಾರಣೆಗೆ ಸಕಾರಾತ್ಮಕವಾಗಿ ಸ್ಪಂದಿಸುತ್ತದೆ ಎಂಬ ಅದಮ್ಯ ವಿಶ್ವಾಸದೊಂದಿಗೆ,

**– ಅತಿಥಿ ಉಪನ್ಯಾಸಕರು,**
ಸರಕಾರಿ ಪ್ರಥಮ ದರ್ಜೆ ಕಾಲೇಜು, ಕೊಪ್ಪಳ.

## 7 ಎಕರೆ ನಿವೇಶನ ಫಲಾನುಭವಿಗಳಿಗೆ ಹಂಚಿಕೆ । ಗ್ರಾಮ ಸಭೆಯಲ್ಲಿ ಅಂತಿಮ

# ದೇಗುಲ ರಸ್ತೆಯಲ್ಲಿ ಕಸ ಹಾಕುವುದನ್ನು ನಿಲ್ಲಿಸಿ

■ವಿಜಯಸಾಕ್ಷಿ ಸುದ್ದಿ, ಲಕ್ಕುಂಡಿ

ಕಳೆದ ಮೂರು ದಿನಗಳಿಂದ ನಡೆದ 2023-24ನೇ ಸಾಲಿನ ವಾರ್ಡ್ ಸಭೆಯಲ್ಲಿ ಸಮರ್ಪಕ ಕುಡಿಯುವ ನೀರು, ಗಟಾರು ಸ್ವಚ್ಛತೆ, ಅಂಗನವಾಡಿಗೆ ಮೂಲಭೂತ ಸೌಲಭ್ಯ, ಮನರೇಗಾ ಯೋಜನೆಯ ವಿವಿಧ ಕಾಮಗಾರಿಗಳು, ಸ್ಮಶಾನ, ನಿವೇಶನ ಹಂಚಿಕೆ ಸೇರಿದಂತೆ ವಿವಿಧ ವಿಷಯಗಳ ಕುರಿತು ಸುದೀರ್ಘ ಚರ್ಚೆ ನಡೆಯಿತು.

ಗ್ರಾಮದಲ್ಲಿರುವ ಸ್ಮಶಾನ ಬಹಳ ದೂರವಾಗುತ್ತಿದೆ ಆದ್ದರಿಂದ, ಅಂಬೇಡ್ಕರ ನಗರ ಹಾಗೂ ವೇಗವಾಗಿ ಬೆಳೆಯುತ್ತಿರುವ ಮಾರುತಿ ನಗರಕ್ಕೆ ಸ್ಮಶಾನಕ್ಕೆ ಜಮೀನು ಖರೀದಿಸಬೇಕು. ಸುಮಾರು 500ಕ್ಕೂ ಹೆಚ್ಚು ಕುಟುಂಬಗಳಿರುವ ಈ ಪ್ರದೇಶಕ್ಕೆ ನ್ಯಾಯಬೆಲೆ ಅಂಗಡಿಯನ್ನು ಸ್ಥಾಪಿಸಬೇಕು. ಶುದ್ಧ ಕುಡಿಯುವ ನೀರಿನ ಘಟಕ ಆರಂಭಿಸಬೇಕು ಎಂದು ಗ್ರಾ.ಪಂ ಮಾಜಿ ಸದಸ್ಯ ಕುಬೇರಪ್ಪ ಬಡಿಗೇರ, ನಿಂಗಪ್ಪ ದೊಡ್ಡಮನಿ, ಬಸವರಾಜ ಅಕ್ಕಿ ಸೇರಿದಂತೆ ಇತರರು ಒತ್ತಾಯಿಸಿದರು.

ಐತಿಹಾಸಿಕ ಲಕ್ಕುಂಡಿ ಗ್ರಾಮಕ್ಕೆ ದೇವಸ್ಥಾನ ವೀಕ್ಷಿಸಲು ನಿತ್ಯವೂ ಪ್ರವಾಸಿಗರು ಬರುತ್ತಿದ್ದು, ಕಾಶಿ ವಿಶ್ವನಾಥ ದೇಗುಲ, ಶಾಲೆಗೆ ಹೋಗುವ ರಸ್ತೆಯಲ್ಲಿ ಮಲ-ಮೂತ್ರ ವಿಸರ್ಜನೆ, ಕಸ ಹಾಕುವುದನ್ನು ನಿಲ್ಲಿಸಿ ಸ್ವಚ್ಛತೆಗೆ ಸಹಕರಿಸಬೇಕೆಂದು ಗ್ರಾ.ಪಂ ಅಧ್ಯಕ್ಷ ಕೆ.ಎಸ್. ಪೂಜಾರ ಹೇಳಿದರು.

2024-25ನೇ ಸಾಲಿನ ಮನೇರೆಗಾ ಕ್ರೀಯಾ ಯೋಜನೆಯಲ್ಲಿ ಸಮುದಾಯ ಆಧಾರಿತ ಕಾಮಗಾರಿಗಾಗಿ ರಸ್ತೆ, ಸಿ.ಸಿ. ರಸ್ತೆ, ಒಳಚರಂಡಿ, ಶಾಲಾ ಮೈದಾನ ಕಾಂಪೌಂಡ್, ಮಳೆ ನೀರು ಕೊಯ್ಲು, ವೈಯಕ್ತಿಕ ಆಧಾರಿತ ಕಾಮಗಾರಿಗಳು, ಉಚಿತ ಗಣಕಯಂತ್ರ ತರಬೇತಿ, ಅಂಗನವಾಡಿ ಕಾರ್ಯಕರ್ತರ, ಸಹಾಯಕರ ನೇಮಕ ಕುರಿತು ಲೆಕ್ಕಾಧಿಕಾರಿ ತುಕಾರಾಮ ಹುಲ್ಲಗಣ್ಣವರ ಸಭೆಗೆ ಮಾಹಿತಿ ನೀಡಿದರು. ಗ್ರಾ.ಪಂ ಅಧ್ಯಕ್ಷ ಕೆ.ಎಸ್. ಪೂಜಾರ, ಉಪಾಧ್ಯಕ್ಷೆ ಪುಷ್ಪಾ ಪಾಟೀಲ, ಪಿ.ಡಿ.ಓ ರಾಜಕುಮಾರ ಭಜಂತ್ರಿ, ಗ್ರಾ.ಪಂ ಸದಸ್ಯರು ಹಾಜರಿದ್ದರು.




ಕೆಲವೇ ದಿನಗಳಲ್ಲಿ ಜೆಜೆಎಂ ಕಾಮಗಾರಿ ಪೂರ್ಣಗೊಳ್ಳಲಿದ್ದು, ಇಡೀ ಗ್ರಾಮಕ್ಕೆ ಸಮರ್ಪಕ ಕುಡಿಯುವ ನೀರು ಪೂರೈಸಲಾಗವುದು. ಈ ಹಿಂದೆ ಆಯ್ಕೆಯಾಗಿರುವ ನಿವೇಶನಗಳ ಫಲಾನುಭವಿಗಳಿಗೆ ಶೀಘ್ರವೇ ನಿವೇಶನ ವಿತರಿಸುವ ಬಗ್ಗೆ ಡಿ.28ರ ಗ್ರಾಮಸಭೆಯಲ್ಲಿ ಅಂತಿಮಗೊಳಿಸಲಾಗವುದು. ಸಹಕಾರಿ ಸಂಘ 2ಕ್ಕೆ ರೇಶನ್ ಅಂಗಡಿ ಮಂಜೂರಿಯಾಗಿದ್ದು, ಶೀಘ್ರವೇ ಆರಂಭಿಸಲಾಗವುದು. ಮನರೇಗಾ ಯೋಜನೆಯಲ್ಲಿ ನಮೂದಿಸಿರುವ ಕಾಮಗಾರಿಯ ಬಗ್ಗೆ ರೈತರು ಕಾಳಜಿ ವಹಿಸಿ ಅಧಿಕಾರಿಗಳನ್ನು ಸಂಪರ್ಕಿಸಿ, ಕಾಮಗಾರಿಯನ್ನು ಅನುಷ್ಠಾನಗೊಳಿಸಿಕೊಳ್ಳಬೇಕು ಎಂದು ವಿನಂತಿಸಿಕೊಂಡರು.

ಗ್ರಾಮದಲ್ಲಿ 4 ಸುಲಭ ಶೌಚಾಲಯ ನಿರ್ಮಾಣಕ್ಕೆ ಸಂಸದ ಪಿ.ಸಿ. ಗದ್ದಿಗೌಡರ ಅನುದಾನ ಒದಗಿಸಿದ್ದು, ಶೀಘ್ರವೇ ಕಾಮಗಾರಿ ಆರಂಭಗೊಳ್ಳಲಿದೆ. ನಾಗರಿಕರು ಬಯಲು ಬಹಿರ್ದೆಸೆಯನ್ನು ಬಿಟ್ಟು, ವೈಯಕ್ತಿಕ ಶೌಚಾಲಯವನ್ನು ಬಳಕೆ ಮಾಡಿಕೊಳ್ಳಬೇಕು.

**– ಕೆ.ಎಸ್. ಪೂಜಾರ. ಗ್ರಾ.ಪಂ ಅಧ್ಯಕ್ಷರು.**

# ಗ್ರಾಮ ಘಟಕಗಳ ಪದಾಧಿಕಾರಿಗಳ ಆಯ್ಕೆ



■ವಿಜಯಸಾಕ್ಷಿ ಸುದ್ದಿ, ಗದಗ

ಕರ್ನಾಟಕ ರಾಜ್ಯ ಡಾ. ಪಂ. ಪುಟ್ಟರಾಜ ರೈತ ಸಂಘದ ವತಿಯಿಂದ ಮುಳಗುಂದ, ಅಸುಂಡಿ, ಸೊರಟೂರ ಗ್ರಾಮ ಘಟಕಗಳನ್ನು ಪ್ರಾರಂಭಿಸಿ, ಘಟಕಗಳಿಗೆ ಪದಾಧಿಕಾರಿಗಳನ್ನು ಮತ್ತು ಸದಸ್ಯರನ್ನು ನೇಮಿಸಿ ನೇಮಕ ಆದೇಶ ಪ್ರತಿಯನ್ನು ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಡಾ. ಪಂ. ಪುಟ್ಟರಾಜ ರೈತ ಸಂಘದ ಸಂಸ್ಥಾಪಕ ಅಧ್ಯಕ್ಷ ಎಂ.ಪಿ. ಮುಳುಗುಂದ, ರಾಜ್ಯ ಅಲ್ಪಸಂಖ್ಯಾತರ ಘಟಕದ ಉಪಾಧ್ಯಕ್ಷ ದಾವಲಸಾಬ ನಾಗನೂರ, ರಾಜ್ಯ ಸಹ ಕಾರ್ಯದರ್ಶಿ ಸಿರಾಜ್‌ಅಹ್ಮದ ಲಕ್ಕುಂಡಿ, ಗದಗ ಜಿಲ್ಲಾ ಮಹಿಳಾ ಘಟಕದ ಅಧ್ಯಕ್ಷರಾದ ಜ್ಯೋತಿ ಕುಲಕರ್ಣಿ, ಜಿಲ್ಲಾ ಉಪಾಧ್ಯಕ್ಷ ಕೆ.ಎ. ಖಾಜಿ ಹಾಗೂ ಹಾಜಿಅಲಿ ಕೊಪ್ಪಳ, ಹರ್ತಿ ಗ್ರಾಮ ಘಟಕದ ಮೈಲಾರಪ್ಪ ಗುಡೂದೂರ, ರೇಖಾ ಬೆಂತೂರ ಹಾಗೂ ಹರ್ತಿ, ಸೊರಟೂರು, ಅಸುಂಡಿ ಮುಳುಗುಂದ ಘಟಕಗಳ ಸದಸ್ಯರು ಭಾಗವಹಿಸಿದ್ದರು.

# ರಾಯಲ್ ಶಾಲೆಯಲ್ಲಿ ವಾರ್ಷಿಕ ಕ್ರೀಡಾಕೂಟ



■ವಿಜಯಸಾಕ್ಷಿ ಸುದ್ದಿ, ಗದಗ

ಇಲ್ಲಿನ ರಾಯಲ್ ಆಂಗ್ಲ ಮಾಧ್ಯಮ ಪ್ರೌಢಶಾಲೆಯಲ್ಲಿ ಪ್ರಾರ್ಥಮಿಕ ಹಾಗೂ ಪೂರ್ವ ಪ್ರಾಥಮಿಕ ಮಕ್ಕಳಿಗಾಗಿ ವಾರ್ಷಿಕ ಕ್ರೀಡಾಕೂಟವನ್ನು ಬುಧವಾರ ಏರ್ಪಡಿಸಲಾಗಿತ್ತು. ಫ್ರಾಗ್ ಜಂಪಿಂಗ್, ಮ್ಯೂಸಿಕಲ್ ಚೇರ್, ಲೆಮನ್ ಸ್ಪೂನ್, ಬ್ಯಾಕ್ವರ್ಡ್ ರನ್ನಿಂಗ್ ಹಾಗೂ ಲಿಂಪಿಂಗ್ ಆಟಗಳಲ್ಲಿ ಮಕ್ಕಳು ಆಸಕ್ತಿಯಿಂದ ಪಾಲ್ಗೊಂಡರು.

ಕಾರ್ಯಕ್ರಮದಲ್ಲಿ ಶಾಲೆಯ ಆಡಳಿತಾಧಿಕಾರಿ ಎ.ಎಂ. ಢಾಲಾಯತ್, ಮುಖ್ಯ ಶಿಕ್ಷಕಿಯರಾದ ಎನ್.ಎಂ. ಕಾಜಿ, ಆರ್.ಎ. ಅಣ್ಣಿಗೇರಿ ಹಾಗೂ ಶಿಕ್ಷಕ ವೃಂದದವರು ಪಾಲ್ಗೊಂಡಿದ್ದರು.

## ಡಿ. 23 ರಂದು ವೈಕುಂಠ ಏಕಾದಶಿಯಂದು ವಿಶೇಷ ಪೂಜೆ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ



ಪಟ್ಟಣದ ಸವಣೂರ ರಸ್ತೆಯಲ್ಲಿರುವ ಶ್ರೀ ವೆಂಕಟೇಶ್ವರ ದೇವಸ್ಥಾನದಲ್ಲಿ ಡಿ.23ರಂದು ವೈಕುಂಠ ಏಕಾದಶಿಯ ನಿಮಿತ್ತ ವಿಶೇಷ ಪೂಜಾ ಕಾರ್ಯಕ್ರಮಗಳು ನೆರವೇರಲಿವೆ.

ಬೆಳಿಗ್ಗೆ 8ರಿಂದ ವೆಂಕಟೇಶ್ವರ ಸ್ವಾಮಿಗೆ ಅಭಿಷೇಕ, ಅಲಂಕಾರ ಪೂಜೆ, ಮಹಾಮಂಗಳಾರತಿ, ಅಲಂಕೃತ ವೈಕುಂಠ ದ್ವಾರದಿಂದ ನಿರ್ಗಮನ ಹಾಗೂ ಸಂಜೆ 6ಕ್ಕೆ ಪಲ್ಲಕ್ಕಿ ಸೇವೆ ನೆರವೇರಲಿದೆ. ಈ ವಿಶೇಷ ಪೂಜಾ ಕಾರ್ಯಕ್ರಮದಲ್ಲಿ ಭಕ್ತರು ಪಾಲ್ಗೊಳ್ಳಬೇಕೆಂದು ದೇವಸ್ಥಾನ ಟ್ರಸ್ಟ್ ಪ್ರಕಟಣೆಯಲ್ಲಿ ತಿಳಿಸಿದೆ.

## ಕಟ್ಟಡ ಮಾಲೀಕರ ಗಮನಕ್ಕೆ

■ವಿಜಯಸಾಕ್ಷಿ ಸುದ್ದಿ, ಗದಗ

2023-24ನೇ ಸಾಲಿಗೆ ಸಮಾಜ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ಬಾಲಕ / ಬಾಲಕಿಯರ ವಿದ್ಯಾರ್ಥಿ ನಿಲಯಗಳಿಗೆ ಮಂಜೂರಾತಿ ಸಂಖ್ಯೆಗಿಂತಲೂ ಹೆಚ್ಚು ವಿದ್ಯಾರ್ಥಿ/ ವಿದ್ಯಾರ್ಥಿನಿಯರು ವಿದ್ಯಾರ್ಥಿನಿಲಯಗಳಿಗೆ ಪ್ರವೇಶ ಕೋರಿ ಅರ್ಜಿಗಳನ್ನು ಸಲ್ಲಿಸಿರುತ್ತಾರೆ. ಈಗಾಗಲೇ ಎಸ್.ಓ.ಪಿ. ಸೂಚನೆಗಳ ಪ್ರಕಾರ ಶೇಕಡಾ 75 ರಷ್ಟು ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲಾಗಿರುತ್ತದೆ. ಆದರೂ ಸಹ ಇನ್ನೂ ಹೆಚ್ಚು ಅರ್ಜಿಗಳು ಬಾಕಿ ಉಳಿದಿರುತ್ತವೆ.

ಪ್ರವೇಶ ಕೋರಿ ಬಂದ ಎಲ್ಲಾ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಅರ್ಹ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ನಿಲಯಗಳಿಗೆ ಪ್ರವೇಶ ನೀಡಬೇಕಾಗಿರುವುದರಿಂದ ಬಾಡಿಗೆ ಕಟ್ಟಡವನ್ನು ಪಡೆದು ಪ್ರವೇಶ ಕಲ್ಪಿಸಿಕೊಡುವಂತೆ ಆಯುಕ್ತರ ಸೂಚನೆಯನ್ವಯ ಖಾಸಗಿ ಮಾಲೀಕತ್ವದ ಬಾಡಿಗೆ ಕಟ್ಟಡವನ್ನು ಪಡೆಯುವುದು ಅವಶ್ಯಕವಾಗಿರುತ್ತದೆ.

150 ವಿದ್ಯಾರ್ಥಿಗಳಿಗೆ ಸ್ಥಳಾವಕಾಶ ಇರುವ ಪ್ರತ್ಯೇಕ ಕೊಠಡಿಗಳನ್ನು, ಶೌಚಾಲಯ, ಸ್ನಾನಗೃಹ ವಿಶಾಲವಾದ ಅಡುಗೆ ಮನೆ, ವಿದ್ಯುತ್ ಸೌಲಭ್ಯ ಬೋರವೆಲ್ ಹೊಂದಿರುವ ಸುಸಜ್ಜಿತ ಕಟ್ಟಡಗಳ ಅವಶ್ಯಕತೆ ಇರುತ್ತದೆ.

ಕಟ್ಟಡವನ್ನು ಬಾಡಿಗೆ ರೂಪದಲ್ಲಿ ಕೊಡಲು ಬಯಸುವ ಕಟ್ಟಡ ಮಾಲೀಕರು ತಕ್ಷಣ ಸಹಾಯಕ ನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ, ಗದಗ ಇವರನ್ನು ಭೇಟಿಯಾಗಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿಯ ದೂರವಾಣಿ ಸಂಖ್ಯೆ : 08372-297258. ಮೊಬೈಲ್ ಸಂಖ್ಯೆ:9480843128 ಸಂಪರ್ಕಿಸಬಹುದಾಗಿದೆ.

### ಎಸ್.ಸಿ.ಎಸ್.ಪಿ-ಟಿ.ಎಸ್.ಪಿ. ಕಾರ್ಯಕ್ರಮಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಡಿಸಿ ಗುರುದತ್ತ ಹೆಗಡೆ

# ಸಭೆಗೆ ಗೈರಾದವರಿಗೆ ನೋಟಿಸ್ ನೀಡಿ

■ವಿಜಯಸಾಕ್ಷಿ ಸುದ್ದಿ, ಧಾರವಾಡ



ಪರಿಶಿಷ್ಟ ಜಾತಿ ಉಪಯೋಜನೆ ಮತ್ತು ಬುಡಕಟ್ಟು ಉಪ ಯೋಜನೆಗಳ ಮೂಲಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣಕ್ಕೆ ನಿಗದಿಪಡಿಸಿರುವ ಅನುದಾನವನ್ನು ಅನುಮೋದಿತ ಕ್ರಿಯಾಯೋಜನೆಯ ಅನುಸಾರ ಬಳಕೆ ಮಾಡಿ, ಶೇ.100ರಷ್ಟು ಪ್ರಗತಿ ಸಾಧಿಸಿ, ಅಧಿಕಾರಿಗಳು ವರದಿ ನೀಡಬೇಕೆಂದು ಜಿಲ್ಲಾ ಸಮಿತಿಯ ಅಧ್ಯಕ್ಷರೂ ಆದ ಜಿಲ್ಲಾಧಿಕಾರಿ ಗುರುದತ್ತ ಹೆಗಡೆ ತಿಳಿಸಿದರು.

ಅವರು ಬುಧವಾರ ಬೆಳಿಗ್ಗೆ ಜಿಲ್ಲಾಧಿಕಾರಿಗಳ ಕಚೇರಿಯ ನೂತನ ಸಭಾಂಗಣದಲ್ಲಿ ಜರುಗಿದ 2023-24ನೇ ಸಾಲಿನ ನವೆಂಬರ್-2023ರ ಅಂತ್ಯದವರೆಗಿನ ಧಾರವಾಡ ಜಿಲ್ಲೆಯ ವಿವಿಧ ಇಲಾಖೆಗಳಲ್ಲಿನ ಪರಿಶಿಷ್ಟ ಜಾತಿ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ, ಕಾರ್ಯಕ್ರಮಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಈ ಸಭೆಯ ಗಂಭೀರತೆ ಅರಿಯದೇ, ಕೆಲವು ಅಧಿಕಾರಿಗಳು ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಉದಾಸೀನತೆ ತೋರುತ್ತಿದ್ದಾರೆ. ಸಭೆಗೆ ಸರಿಯಾದ ಪ್ರಗತಿ ಮಾಹಿತಿ ಸಲ್ಲಿಸಿಲ್ಲ. ಕೆಲವರು ತಮ್ಮ ಕಚೇರಿ ಸಿಬ್ಬಂದಿಗಳನ್ನು ಕಳುಹಿಸಿ, ಮೇಲಾಧಿಕಾರಿಗಳು ನಿರ್ಲಕ್ಷ್ಯ ವಹಿಸುತ್ತಿರುವುದು ಕಾಣುತ್ತಿದೆ ಎಂದರಲ್ಲದೆ, ಇಂದಿನ ಸಭೆಗೆ ಗೈರಾದವರಿಗೆ ನೋಟಿಸ್ ನೀಡಿ, ಉತ್ತರ ಪಡೆಯಲು ಜಿಲ್ಲಾಧಿಕಾರಿಗಳು ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗೆ ಸೂಚಿಸಿದರು.

ವಿವಿಧ ಯೋಜನೆಗಳ ಫಲಾನುಭವಿಗಳ ಆಯ್ಕೆಯಲ್ಲಿ ವಿಳಂಬ ಸಲ್ಲದು. ಸಂಬಂಧಿಸಿದ ಜನಪ್ರತಿನಿಧಿಗಳಿಗೆ ನಿಯಮಾನುಸಾರ ಪಟ್ಟಿ ಸಲ್ಲಿಸಿ, ಗುರಿ ಅನುಸಾರ ಪ್ರಗತಿ ಸಾಧಿಸುವುದು ಆಯಾ ಇಲಾಖೆಯ ಅಧಿಕಾರಿಗಳ ಜವಾಬ್ದಾರಿಯಾಗಿದೆ. ಇಲಾಖೆ ಯೋಜನೆಗಳಿಗೆ ಸರ್ಕಾರದಿಂದ ಪೂರ್ಣಪ್ರಮಾಣದ ಅನುದಾನ ಬಿಡುಗಡೆಯಾಗಿ ಕಾಮಗಾರಿಗಳು ಕಾಲಮಿತಿಯಲ್ಲಿ ಪೂರ್ಣಗೊಳ್ಳುವಂತೆ ಮಾಡಬೇಕು. ಜನವರಿ ಅಂತ್ಯದೊಳಗೆ ಪ್ರಸಕ್ತ ಸಾಲಿನ ನಿಗದಿತ ಗುರಿ ಸಾಧಿಸಿ, ವರದಿ ಸಲ್ಲಿಸಬೇಕೆಂದು ಜಿಲ್ಲಾಧಿಕಾರಿಗಳು ಅಧಿಕಾರಿಗಳಿಗೆ ಸೂಚಿಸಿದರು.

ಇದೇ ಸಂದರ್ಭದಲ್ಲಿ ಜಿಲ್ಲಾ ಜಾಗೃತಿ ಮತ್ತು ಉಸ್ತುವಾರಿ ಸಮಿತಿ ಸಭೆ ಜರುಗಿಸಿದ ಜಿಲ್ಲಾಧಿಕಾರಿಗಳು, ಜಾತಿ ನಿಂದನೆ, ದೌರ್ಜನ್ಯ ಹಾಗೂ ಇತರ ಪ್ರಕರಣ, ಸಮಸ್ಯೆಗಳ ಕುರಿತು ಸಮಿತಿ ಸದಸ್ಯರೊಂದಿಗೆ ಚರ್ಚಿಸಿ, ಪರಿಹಾರ ಕ್ರಮ ಜರುಗಿಸಲು ಸಂಬಂಧಿಸಿದ ಅಧಿಕಾರಿಗಳಿಗೆ ನಿರ್ದೇಶಿಸಿದರು.

ಈ ಉಪಯೋಜನೆಗಳಡಿಯಲ್ಲಿ ಬಿಡುಗಡೆ ಆಗಿರುವ ಮೊದಲ ಕಂತಿನ ಅನುದಾನವನ್ನು ಪೂರ್ಣವಾಗಿ ಬಳಸದಿರುವುದು ಕಂಡುಬರುತ್ತಿದೆ. ಇದನ್ನು ಗಂಭೀರವಾಗಿ ಪರಿಗಣಿಸಿದ್ದು, ಎಸ್.ಸಿ.ಎಸ್.ಪಿ ಮತ್ತು ಟಿ.ಎಸ್.ಪಿ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ನಿಷ್ಕಾಳಜಿ ತೋರುವ ಅಧಿಕಾರಿಗಳ ಮೇಲೆ ನಿಯಮಾನುಸಾರ ಪ್ರಕರಣ ದಾಖಲಿಸಿ, ಕಾನೂನು ಕ್ರಮ ಜರುಗಿಸುವುದಾಗಿ ಜಿಲ್ಲಾಧಿಕಾರಿಗಳು ಇಲಾಖೆಯ ಅಧಿಕಾರಿಗಳಿಗೆ ಎಚ್ಚರಿಸಿದರು.

ಮಹಾನಗರ ಉಪ ಪೊಲೀಸ್ ಆಯುಕ್ತ ರಾಜೀವ್ ಎಂ., ಹೆಚ್ಚುವರಿ ಪೊಲೀಸ್ ಅಧೀಕ್ಷಕ ನಾರಾಯಣ ಬರಮನಿ, ಜಿಲ್ಲಾ ಪಂಚಾಯತ್ ಮುಖ್ಯ ಯೋಜನಾಧಿಕಾರಿ ದೀಪಕ್ ಮಡಿವಾಳರ ವೇದಿಕೆಯಲ್ಲಿದ್ದರು. ಸಮಾಜ ಕಲ್ಯಾಣ ಇಲಾಖೆ ಅಪರ ನಿರ್ದೇಶಕ ಅಲ್ಲಾಭಕ್ಷ್ ಎಂ.ಎಸ್. ಸ್ವಾಗತಿಸಿ, ಸಭೆ ನಿರ್ವಹಿಸಿದರು. ಸಭೆಯಲ್ಲಿ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು, ಜಿಲ್ಲಾ ಜಾಗೃತಿ ಮತ್ತು ಉಸ್ತುವಾರಿ ಸಮಿತಿ ಸದಸ್ಯರು ಭಾಗವಹಿಸಿದ್ದರು.

## ಪ್ರೀತಿ ಕಬಾಡರ ರಾಜ್ಯ ಮಟ್ಟದಲ್ಲಿ ತೃತೀಯ ಸ್ಥಾನ

■ವಿಜಯಸಾಕ್ಷಿ ಸುದ್ದಿ, ಗದಗ



ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಮತ್ತು ಕರ್ನಾಟಕ ರಾಜ್ಯ ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ನಿಧಿ ಇವರ ಸಹಯೋಗದಲ್ಲಿ ಬೆಂಗಳೂರಿನಲ್ಲಿ ಜರುಗಿದ ರಾಜ್ಯ ಮಟ್ಟದ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಗದಗ ಸರಕಾರಿ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಉತ್ತಮ ಸಾಧನೆ ಗೈದಿದ್ದು, ಕುಮಾರಿ ಪ್ರೀತಿ ಕಬಾಡರ ಏಕ ಪಾತ್ರಾಭಿನಯ ವಿಭಾಗದಲ್ಲಿ ತೃತೀಯ ಸ್ಥಾನ ಪಡೆದಿದ್ದಾಳೆ. ಈ ವಿದ್ಯಾರ್ಥಿ ಕಳೆದ ವರ್ಷ ಕೂಡ ರಾಜ್ಯ ಮಟ್ಟದ ಪ್ರಶಸ್ತಿ ಬಾಚಿಕೊಂಡದ್ದನ್ನು ಇಲ್ಲಿ ಸ್ಮರಿಸಬಹುದು. ರಸಪ್ರಶ್ನೆ ಸ್ಪರ್ಧೆಯಲ್ಲಿ ಅಂತಿಮ ಸುತ್ತಿನವರೆಗೂ ಮುನ್ನಡೆದ ಆದಿತ್ಯ ಗೊರವರ ಮತ್ತು ನಂದಿತಾ ಹಂಪಿಹೊಳಿ ನಾಲ್ಕನೇ ಸ್ಥಾನ ಪಡೆದರು. ಉತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಪ್ರಾಚಾರ್ಯ ಪೂರ್ಣಿಮಾ ಹೊಸಮನಿ ಮತ್ತು ಉಪನ್ಯಾಸಕ ವೃಂದದವರು ಸತ್ಕರಿಸಿ ಅಭಿನಂದಿಸಿದ್ದಾರೆ.

## 'ಕಾಯಕಯೋಗಿ' ಪ್ರಶಸ್ತಿಗೆ ಗವಿಶಿದ್ಧಯ್ಯ ಆಯ್ಕೆ

■ವಿಜಯಸಾಕ್ಷಿ ಸುದ್ದಿ, ಗದಗ



ಜನಪದ ಕೂಗು ಕಾರ್ಯಕ್ರಮದ ಮೂಲಕ ವಿಶಿಷ್ಟ ದಾಖಲೆ ನಿರ್ಮಿಸಿರುವ ಗದಗ ಜಿಲ್ಲೆಯ ಮುಂಡರಗಿ ತಾಲೂಕಿನ ಜಂತಲಿ ಶಿರೂರು ಗ್ರಾಮದ ಜನಪದ ಕಲಾವಿದ ಗವಿಶಿದ್ಧಯ್ಯ ಜ.ಹಳ್ಳಿಕೇರಿಮಠ ಜೀವಮಾನದ ಸಾಧನೆಯನ್ನು ಪರಿಗಣಿಸಿ ಕೊಪ್ಪಳ ಜಿಲ್ಲೆಯ ಯಲಬುರ್ಗಾ ಪಟ್ಟಣದ ಬನಶ್ರೀ ಸಾಹಿತ್ಯ ಸಂಘಟನೆ ಬಳಗವು 2023ನೇ ಸಾಲಿನ 'ಕಾಯಕಯೋಗಿ' ಪ್ರಶಸ್ತಿಗೆ ಆಯ್ಕೆ ಮಾಡಿದೆ ಎಂದು ಪ್ರಕಟಣೆ ತಿಳಿಸಿದೆ.

### ಈರುಳ್ಳಿ ಬೆಳೆ ಕ್ಷೇತ್ರೋತ್ಸವ, ಬ್ಯಾಟರಿ ಚಾಲಿತ ಈರುಳ್ಳಿ ದೇಟು ಕತ್ತರಿಸುವ ಯಂತ್ರದ ಪ್ರಾತ್ಯಕ್ಷಿಕೆ

# ಕೃಷಿಯಲ್ಲಿ ಯಾಂತ್ರೀಕರಣ ಅಳವಡಿಸಿಕೊಳ್ಳಿ

■ವಿಜಯಸಾಕ್ಷಿ ಸುದ್ದಿ, ಗದಗ



ಹುಲಕೋಟಿಯ ಐ.ಸಿ.ಎ. ಆರ್.ಕೆ.ಎಚ್. ಪಾಟೀಲ ಕೃಷಿ ವಿಜ್ಞಾನ ಕೇಂದ್ರದ ವತಿಯಿಂದ 2023-24ನೇ ಸಾಲಿನ ಮುಂಚೂಣಿ ಪ್ರಾತ್ಯಕ್ಷಿಕೆ ಯೋಜನೆಯಡಿ, ಮುಂಡರಗಿ ತಾಲೂಕಿನ ಶಿಂಗಟರಾಯನಕೇರಿ ಗ್ರಾಮದ ಶಂಕರಗೌಡ ಪಾಟೀಲ ಇವರ ಹೊಲದಲ್ಲಿ 'ಭೀಮಾ ಸೂಪರ್' ಈರುಳ್ಳಿ ತಳಿಯ ಕ್ಷೇತ್ರೋತ್ಸವವನ್ನು ಇತ್ತೀಚೆಗೆ ಏರ್ಪಡಿಸಲಾಗಿತ್ತು.

ಪ್ರಾತ್ಯಕ್ಷಿಕೆಯಲ್ಲಿ ತೆಗೆದು-ಕೊಂಡ 10 ಜನ ರೈತರು ಭೀಮಾ ಸೂಪರ್ ತಳಿಯ ಬಗ್ಗೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸುತ್ತ, ಈ ತಳಿಯ ಗಡ್ಡೆಗಳು ಒಂದೇ ಆಕಾರದಲ್ಲಿದ್ದು, ಉತ್ತಮ ಗಾತ್ರದ, ಗುಣಮಟ್ಟದ ಆಕರ್ಷಕ ಬಣ್ಣವನ್ನು ಹೊಂದಿವೆ. ಒಳ್ಳೆಯ ಧಾರಣೆಯನ್ನು ಪಡೆಯಬಹುದು ಎಂದು ತಿಳಿಸಿದರು.

ಕೆವಿಕೆಯ ತೋಟಗಾರಿಕೆ ವಿಜ್ಞಾನಿ ಹೇಮಾವತಿ ಹಿರೇಗೌಡರ ಮಾತನಾಡಿ, ಭೀಮಾ ಸೂಪರ್ ತಳಿಯು ಸುಧಾರಿತ ಈರುಳ್ಳಿ ತಳಿಯಾಗಿದ್ದು, ಇದು ಈರುಳ್ಳಿ ಮತ್ತು ಬಳ್ಳೊಳ್ಳಿ ನಿರ್ದೇಶನಾಲಯ, ಪುಣೆ ಇಂದ ಬಿಡುಗಡೆಯಾಗಿದೆ. ಎಲೆಗಳಿಗೆ ಬರುವ ನೇರಳೆ ಚುಕ್ಕೆ ರೋಗವನ್ನು ತಡೆದುಕೊಳ್ಳುವ ಶಕ್ತಿ ಹೊಂದಿದೆ. ಪ್ರತಿ ಎಕರೆಗೆ 190 ಕ್ವಿಂಟಾಲ್‌ನಷ್ಟು ಇಳುವರಿ ಕೊಡುವ ಸಾಮರ್ಥ್ಯ ಇದೆ ಎಂದು ತಿಳಿಸಿದರು.

ಕೃಷಿ ಇಂಜಿನಿಯರಿಂಗ್ ವಿಜ್ಞಾನಿ ಡಾ. ವಿನಾಯಕ ನಿರಂಜನ್ ಇವರು ಬ್ಯಾಟರಿ ಚಾಲಿತ ಈರುಳ್ಳಿ ದೇಟು ಹಾಗೂ ಬೇರು ಕತ್ತರಿಸುವ ಯಂತ್ರದ ಪ್ರಾತ್ಯಕ್ಷಿಕೆಯನ್ನು ಕೈಗೊಂಡು, ಸಾಂಪ್ರದಾಯಿಕ ಈರುಳ್ಳಿ ದೇಟು ಕತ್ತರಿಸುವ ಪದ್ಧತಿಗೆ ಹೋಲಿಸಿದಾಗ ಯಂತ್ರದಿಂದ ಈರುಳ್ಳಿ ದೇಟು ಕತ್ತರಿಸಲು ಸಮಯದ ಉಳಿತಾಯವಾಗುತ್ತದೆ ಹಾಗೂ ಕಾರ್ಯಾಚರಣೆಯ ಶ್ರಮ ಕಡಿಮೆಯಾಗುತ್ತದೆ ಎಂದು ಮಾಹಿತಿ ನೀಡಿದರು. ಕಡಿಮೆ ಶ್ರಮವಹಿಸಿ ಕೆಲಸ ಮಾಡಲು ರೈತರು ಹಾಗೂ ಕೂಲಿಯಾಳುಗಳು ಯಾಂತ್ರೀಕರಣವನ್ನು ಅಳವಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಈರುಳ್ಳಿ ಬೆಳೆಗೆ ಜಿಪ್ಸಂ ಹಾಕಿರುವದರಿಂದ ಗಡ್ಡೆಗಳು ಕೊಳೆಯುವುದಿಲ್ಲ. ಶಿಫಾರಸ್ಸು ಮಾಡಿದ ಪ್ರಮಾಣದಲ್ಲಿ ರಸಗೊಬ್ಬರ ಬಳಕೆ ಮತ್ತು ಐ.ಐ.ಎಚ್.ಆರ್. ಬೆಂಗಳೂರಿನಿಂದ ಬಿಡುಗಡೆಯಾದ ತರಕಾರಿ ಸ್ಪೆಷಲ್ (ಲಘು ಪೋಷಕಾಂಶಗಳ ಮಿಶ್ರಣ) ಸಿಂಪರಣೆ ಮಾಡುವುದರಿಂದ ಅಧಿಕ ಇಳುವರಿ ಹಾಗೂ ಗುಣಮಟ್ಟದ ಗಡ್ಡೆಗಳನ್ನು ಪಡೆಯಬಹುದು ಎಂದು ರೈತರಿಗೆ ತಿಳಿಸಿದರು.

ಪ್ರಾತ್ಯಕ್ಷಿಕೆ ತಾಕುಗಳಿಗೆ ರೈತರ ಭೇಟಿಯನ್ನು ಏರ್ಪಡಿಸಿ ಪ್ರಾತ್ಯಕ್ಷಿಕೆಗಳ ಮಹತ್ವದ ಕುರಿತು ರೈತರಿಗೆ ಮಾಹಿತಿ ನೀಡಲಾಯಿತು. ಈ ಕಾರ್ಯಕ್ರಮದಲ್ಲಿ ಪ್ರಗತಿಪರ ರೈತರಾದ ಚಂದ್ರಪ್ಪ ಕದಂಪೂರ, ಮರಿಯಪ್ಪ ಪೂಜಾರ, ರಾಮನಗೌಡ ಹಿರೇಗೌಡರ, ದೇವಪ್ಪ ಭಿಂಗಿ ಸೇರಿದಂತೆ ಸುಮಾರು 50 ಜನ ರೈತರು ಭಾಗವಹಿಸಿದ್ದರು.

## ಶಿರಹಟ್ಟಿ ಪೇಟೆ ಶ್ರೀ ವೀರಭದ್ರೇಶ್ವರ ಕಾರ್ತಿಕೋತ್ಸವ




■ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ

ಕಾರ್ತಿಕ ಮಾಸದಲ್ಲಿ ಅಗ್ನಿಯನ್ನು ಆರಾಧನೆ ಮಾಡುವುದು ಶ್ರೇಷ್ಠವಾಗಿದ್ದು, ಬೆಳಕಿಗೆ ಜಾತಿ-ಮತ-ಭೇದವಿಲ್ಲ. ಕಾರ್ತಿಕೋತ್ಸವದಂತಹ ಪುಣ್ಯ ಕಾರ್ಯಕ್ರಮದಲ್ಲಿ ಭಾಗಿಯಾಗಿ, ನಿಮ್ಮಲ್ಲಿರುವ ಅಜ್ಞಾನದ ಕಗ್ಗತಲನ್ನು ಹೊಡೆದೋಡಿಸಿ, ಸುಜ್ಞಾನದ ದೀಪ ಬೆಳಗಿಸುವುದರ ಮೂಲಕ ಜನ್ಮ ಸಾರ್ಥಕಪಡಿಸಿಕೊಳ್ಳಬೇಕೆಂದು ಕ್ಷೇತ್ರ ವರವಿಯ ಮೌನೇಶ್ವರ ಸ್ವಾಮೀಜಿ ಹೇಳಿದರು.

ಅವರು ಮಂಗಳವಾರ ಶಿರಹಟ್ಟಿ ಪೇಟೆಯ ಶ್ರೀ ವೀರಭದ್ರೇಶ್ವರ ದೇವರ 41ನೇ ವರ್ಷದ ಕಾರ್ತಿಕೋತ್ಸವ ಸಮಾರಂಭದ ಸಾನ್ನಿಧ್ಯ ವಹಿಸಿ ಮಾತನಾಡಿದರು.

ವೀರಭದ್ರ ದೇವರು ದುಷ್ಟ ನಿಗ್ರಹ, ಶಿಷ್ಟ ಪರಿಪಾಲಕನಾಗಿದ್ದಾನೆ. ಸದಾ ತನ್ನ ಭಕ್ತರಿಗೆ ಒಳಿತನ್ನು ಬಯಸುವ ಕಾಮಧೇನುವಾಗಿ ಹಲವು ಕಡೆಗಳಲ್ಲಿ ಪೂಜೆಗೊಳ್ಳುತ್ತಿದ್ದಾನೆ. ಸದ್ಭಕ್ತರು ಇಂತಹ ಕಾರ್ತಿಕೋತ್ಸವ ಸಮಾರಂಭದಲ್ಲಿ ಆತನನ್ನು ನೆನೆಯುತ್ತಾ ದೀಪ ಹಚ್ಚಿ ಸಂಭ್ರಮಿಸುತ್ತಿರುವುದು ಪುಣ್ಯದ ಕೆಲಸವಾಗಿದೆ. ಸಮಿತಿಯವರು ಹೀಗೆ ನಿರಂತರ ವೀರಭದ್ರನ ಸೇವೆಯನ್ನು ಮುಂದುವರೆಸಿಕೊಂಡು ಹೋಗಬೇಕೆಂದು ಹೇಳಿದರು.

ಬೆಳಿಗ್ಗೆ 6 ಗಂಟೆಗೆ ಶ್ರೀ ವೀರಭದ್ರ ದೇವರಿಗೆ ರುದ್ರಾಭಿಷೇಕ ಹಾಗೂ ಮಧ್ಯಾಹ್ನ 1 ಗಂಟೆಗೆ ಅನ್ನಸಂತರ್ಪಣೆ ಜರುಗಿತು. ಶಿಕ್ಷಕ ಸಿದ್ದು ಹಲಸೂರ ಉಪನ್ಯಾಸ ನೀಡಿದರು. ಕೊಂಚಿಗೇರಿಯ ದುರ್ಗಾದೇವಿ ಭಜನಾ ಸಂಘದ ಈರಣ್ಣ ಕಬ್ಬಿಣದ ಮತ್ತು ಸಂಗಡಿಗರಿಂದ ಭಜನಾ ಕಾರ್ಯಕ್ರಮ ನಡೆಸಿಕೊಟ್ಟರು.

ಅಧ್ಯಕ್ಷತೆಯನ್ನು ಸಿ.ಸಿ. ನೂರಶೆಟ್ಟರ ವಹಿಸಿದ್ದರು. ಸಿದ್ದಲಿಂಗಯ್ಯ ಕಳ್ಳಿಮಠ, ಬಸವರಾಜ ಹೊಸೂರ, ಮುತ್ತು ಮಜ್ಜಗಿ, ಸುರೇಶ ಹವಳದ, ಶಿವಯೋಗಿ ಪಟ್ಟಣಶೆಟ್ಟರ, ಬಸವರಾಜ ರಾಜಮನಿ, ಸಿದ್ದು ಹೊಸೂರ, ಸಂತೋಷ ಆಲೂರ, ಕಿರಣ ಮಜ್ಜಗಿ ಮುಂತಾದವರು ಉಪಸ್ಥಿತರಿದ್ದರು.

## ಪ್ರವೇಶದ್ವಾರ ನಿರ್ಮಾಣಕ್ಕೆ ಭೂಮಿಪೂಜೆ



■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ತಾಲೂಕಿನ ಒಡೆಯರ ಮಲ್ಲಾಪೂರ ಗ್ರಾಮದ ಗ್ರಾಮದೇವಿ ದೇವಸ್ಥಾನದ ಪ್ರವೇಶದ್ವಾರ ನಿರ್ಮಾಣಕ್ಕೆ ಮಂಗಳವಾರ ಭೂಮಿಪೂಜೆ ನೆರವೇರಿಸಲಾಯಿತು.

ಈ ವೇಳೆ ಮಾತನಾಡಿದ ಗ್ರಾ.ಪಂ ಸದಸ್ಯ ಪದ್ಮರಾಜ ಪಾಟೀಲ, ಗ್ರಾಮದಲ್ಲಿ ಪುರಾತನ ಇತಿಹಾಸದೊಂದಿಗೆ ಶ್ರದ್ಧಾ, ಭಕ್ತಿ ನಂಬಿಕೆಯುಳ್ಳ ದೇವಸ್ಥಾನ ಇದಾಗಿದೆ. ನಂಬಿದ ಭಕ್ತರ ಇಷ್ಟಾರ್ಥಗಳನ್ನು ಸಿದ್ಧಿಸುವ ಶಕ್ತಿದೇವತೆಯೂ ಹೌದು. ಕೈಗಾ-ಇಳಕಲ್ ರಾಜ್ಯ ಹೆದ್ದಾರಿಯಿಂದ 2 ಕಿಮೀ ಅಂತರದಲ್ಲಿದ್ದು, ಬರುವ ಭಕ್ತರಿಗೆ ಮಾರ್ಗ ಸೂಚಿಯಾಗಲಿ ಮತ್ತು ಈ ದೇವಸ್ಥಾನದ ಮಹತ್ವ ಎಲ್ಲರಿಗೂ ತಲುಪಲಿ. ಈ ಕಾರಣದಿಂದ ಪ್ರವೇಶದ್ವಾರ ನಿರ್ಮಾಣ ಮಾಡಲಾಗುತ್ತಿದ್ದು, ಭಕ್ತರ ಸಹಾಯ-ಸಹಕಾರ ಅವಶ್ಯ ಎಂದರು.

ಈ ವೇಳೆ ಹೊನ್ನಪ್ಪ ಪಶುಪತಿಹಾಳ, ಯಲ್ಲಪ್ಪ ಕಡಾರಿ, ಲಕ್ಷಣ ಮೆಳ್ಳಿಗಟ್ಟಿ, ದೇವೇಂದ್ರಪ್ಪ ಬಾರಕಿ, ಯಶವಂತಗೌಡ ಪಾಟೀಲ, ಶಶಿಧರ ಪಾಟೀಲ, ದ್ಯಾಮಣ್ಣ ತಳವಾರ, ಲಕ್ಷಣ ತಳವಾರ, ಮಂಜುನಾಥ ಡಂಬಳ, ಭೀಮಸೀ ಪಶುಪತಿಹಾಳ ಮುಂತಾದವರಿದ್ದರು.

### ವಿಕಸಿತ ಭಾರತ ಸಂಕಲ್ಪ ರಥಯಾತ್ರೆಗೆ ಚಾಲನೆ ನೀಡಿದ ಶಾಸಕ ಡಾ.ಚಂದ್ರು ಲಮಾಣಿ

# ಹಳ್ಳಿಗಳ ಏಳ್ಗೆಯಿಂದ ದೇಶದ ಅಭಿವೃದ್ಧಿ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ




ಕೇಂದ್ರ ಸರ್ಕಾರವು ಜಾರಿಗೆ ತಂದಿರುವ ಜನಪ್ರಿಯ ಯೋಜನೆಗಳನ್ನು ದೇಶದ ಎಲ್ಲಾ ಮನೆಗಳಿಗೆ ತಲುಪಿಸುವ ಉದ್ದೇಶವನ್ನು ವಿಕಸಿತ ಭಾರತ ಸಂಕಲ್ಪ ಯಾತ್ರೆ ಹೊಂದಿದೆ ಎಂದು ಶಾಸಕ ಡಾ.ಚಂದ್ರು ಲಮಾಣಿ ಹೇಳಿದರು.

ಅವರು ಮಂಗಳವಾರ ತಾಲೂಕಿನ ಪು.ಬಡ್ನಿ ಗ್ರಾಮದಲ್ಲಿ ವಿಕಸಿತ ಭಾರತ ಸಂಕಲ್ಪ ರಥಯಾತ್ರೆಗೆ ಚಾಲನೆ ನೀಡಿ ಮಾತನಾಡಿದರು.

ಗ್ರಾಮದಲ್ಲಿ ವಿಕಸಿತ ಭಾರತ ಸಂಕಲ್ಪ ಯಾತ್ರೆಯ ಅಂಗವಾಗಿ ಕೇಂದ್ರ ಸರ್ಕಾರದ ಯೋಜನೆಗಳನ್ನು ಬಡವರ ಮನೆ ಬಾಗಿಲಿಗೆ ತಲುಪಿಸುವ ಕಾರ್ಯಕ್ರಮ ಇದಾಗಿದೆ. ಹೆಮ್ಮೆಯ ಪ್ರಧಾನಿ ನರೇಂದ್ರ ಮೋದಿಯವರ ಕನಸಿನಂತೆ ವಿಶ್ವ ಭೂಪಟದಲ್ಲಿ ಭಾರತ ವಿಶ್ವಗುರುವಾಗಬೇಕೆಂದರೆ, ಭಾರತೀಯರ ಸಹಕಾರ ಮುಖ್ಯವಾಗಿದೆ.

ಈ ದೇಶದ ಕಟ್ಟಕಡೆಯ ವ್ಯಕ್ತಿಗೂ ಕೇಂದ್ರ ಸರ್ಕಾರದ ಸವಲತ್ತುಗಳು ದೊರಕಬೇಕು. ದೇಶದ ಪ್ರತಿ ಹಳ್ಳಿಯೂ ಅಭಿವೃದ್ಧಿಯಾದರೆ ಮಾತ್ರ ದೇಶ ಅಭಿವೃದ್ಧಿಯಾಗಲು ಸಾಧ್ಯ. ಈ ಪರಿಕಲ್ಪನೆಯಲ್ಲಿ ಮೋದಿಯವರು ತಮ್ಮನ್ನು ದೇಶಕ್ಕಾಗಿ ಸಮರ್ಪಿಸಿಕೊಂಡಿದ್ದಾರೆ. ಇಂತಹ ಶ್ರೇಷ್ಠವಾದ ವ್ಯಕ್ತಿ ದೇಶದ ಶಕ್ತಿಯಾಗಿ ದೇಶವನ್ನಾಳುತ್ತಿರುವುದು ನಮ್ಮೆಲ್ಲರ ಹೆಮ್ಮೆ. ಮುಂಬರುವ ಚುನಾವಣೆಯಲ್ಲಿಯೂ ಅವರನ್ನೇ ಮತ್ತೆ ಪ್ರಧಾನಿಯಾಗಿಸೋಣ ಎಂದರು.

ಬುಧವಾರ ಯಳವತ್ತಿ ಗ್ರಾಮದಲ್ಲಿಯೂ ವಿಕಸಿತ ಭಾರತ ಸಂಕಲ್ಪ ಯಾತ್ರೆಯ ಕಾರ್ಯಕ್ರಮ ನಡೆಯಿತು. ಈ ವೇಳೆ ಗ್ರಾ.ಪಂ ಅಧ್ಯಕ್ಷೆ ಆರ್.ಎಸ್. ಹಳಮನಿ, ಬಸವಣ್ಣೆವ್ವ ಚಿಣಗಿ, ಪಿಡಿಓ ಎಸ್.ಎಸ್. ಹುನಗುಂದ, ಬಸನಗೌಡ ಪಿಡ್ಡನಗೌಡ. ವಿ.ಎಂ. ಮೇಟಿ, ಬಾಪೂಗೌಡ ಭರಮಗೌಡ್ರ, ಕ್ಯಾಬಣ್ಣ ಶಿಗ್ಲಿ, ಮಂಜಪ್ಪ ಕುರಿ, ಶಿವಯೋಗಿ ಹೊಸಗೌಡ್ರ, ಸೋಮನಗೌಡ ನಿಂಗನಗೌಡ್ರ, ಶಿವಯ್ಯ ಮಠಪತಿ, ಅಧಿಕಾರಿಗಳು ಸೇರಿದಂತೆ ಗ್ರಾ.ಪಂ ಸದಸ್ಯರು, ಗಣ್ಯರು, ಫಲಾನುಭವಿಗಳು ಇದ್ದರು. ಈ ವೇಳೆ ಉಜ್ವಲ್ ಯೋಜನೆ ಫಲಾನುಭವಿಗಳಿಗೆ ಗ್ಯಾಸ್, ಸ್ಟೋವ್ ವಿತರಿಸಲಾಯಿತು.

ಈ ವೇಳೆ ಶಿರಹಟ್ಟಿ ಮಂಡಲ ಅಧ್ಯಕ್ಷ ಫಕ್ಕಿರೇಶ ರಟ್ಟಿಹಳ್ಳಿ, ಪ್ರೇಮಕ್ಕ ಹರಿಜನ, ಸುಭಾಸ ಬಟಗುರ್ಕಿ, ಶೇಖಣ್ಣ ಕರೆಣ್ಣವರ ಮುತ್ತಣ್ಣ ಚೋಟಗಲ್, ಹೊಳಲಪ್ಪ ತಳವಾರ, ಶಿವಪುತ್ರಪ್ಪ ಚೋಟಗಲ್, ಶಿವಪ್ಪ ಕೊರಕನರವ, ಈರಬಸಪ್ಪ ಜಿಡ್ಡಿ ಸೇರಿ ಗ್ರಾಪಂ ಸದಸ್ಯರು, ಗಣ್ಯರು, ಅಧಿಕಾರಿಗಳು ಇದ್ದರು.

# ಸಿಎಂ ಸಿದ್ದರಾಮಯ್ಯರಿಗೆ ಭಾವಚಿತ್ರ ಕಾಣಿಕೆ



■ವಿಜಯಸಾಕ್ಷಿ ಸುದ್ದಿ, ಗದಗ

ಇತ್ತೀಚೆಗೆ ಗದುಗಿಗೆ ಆಗಮಿಸಿದ್ದ ಸಿಎಂ ಸಿದ್ದರಾಮಯ್ಯ ಅವರಿಗೆ ಸರ್ಕಾರಿ ಬಾಲಕರ/ಬಾಲಕಿಯರ ಬಾಲ ಮಂದಿರದ ಚಿತ್ರಕಲೆ/ಕರಕುಶಲ ತರಬೇತುದಾರ, ಕಲಾವಿದ ಡಾ. ಜಾಕಿರ್‌ಹುಸೇನ ಮ. ಕೊರ್ಲಹಳ್ಳಿ ಇವರು ಚಾರ್ಕೋಲ್ ಮಾಧ್ಯಮದಿಂದ ರಚಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಭಾವ ಚಿತ್ರವನ್ನು ಕಾಣಿಕೆಯಾಗಿ ನೀಡಿದರು.

ಈ ಸಂದರ್ಭದಲ್ಲಿ ಸಚಿವ ಎಚ್.ಕೆ. ಪಾಟೀಲ, ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರು, ಗದಗ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಶಿಶು ಅಭಿವೃದ್ಧಿ ಇಲಾಖೆಯ ಅಧಿಕಾರಿಗಳು, ಬಾಲ ಮಂದಿರದ ಅಧೀಕ್ಷಕರು, ಸಿಬ್ಬಂದಿ ವರ್ಗದವರು, ಮಕ್ಕಳ ರಕ್ಷಣಾ ಘಟಕದ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ಸದಾಫ ತಹಶೀಲ್ದಾರ್‌ಗೆ ಕಲಾ ಪದಕ

■ವಿಜಯಸಾಕ್ಷಿ ಸುದ್ದಿ, ಗದಗ



ಇತ್ತೀಚೆಗೆ ಚಂಡಾವರಂ ಚಿತ್ರಕಲಾ ನೀಲಿಯಂ ವಿಶಾಖಪಟ್ಟಣಂ-ಆಂಧ್ರ ಪ್ರದೇಶ ಇವರ ಸಂಯುಕ್ತಾಶ್ರಯದಲ್ಲಿ ನಡೆದ 6ನೇ ವರ್ಷದ ಆಲ್ ಇಂಡಿಯಾ ಚಿಲ್ಡ್ರನ್ ಆರ್ಟ್ ಕಾಂಪಿಟೇಶನ್‌ನಲ್ಲಿ ಗದುಗಿನ ಎಂ.ಕೆ. ಕೊರ್ಲಹಳ್ಳಿ ಫೌಂಡೇಶನ್ ಟ್ರಸ್ಟ್ ಚಿತ್ರಕಲೆ, ಕರಕುಶಲ, ನೃತ್ಯ, ಉಚಿತ ತರಬೇತಿ ಕೇಂದ್ರದ ವಿದ್ಯಾರ್ಥಿನಿ ಸದಾಫ ಖಾ.ತಹಶೀಲ್ದಾರ ಅಮೃತ ವಿಷಯ ಪೂರಕ ಚಿತ್ರ ರಚಿಸಿ ಕಲಾ ಪದಕ ಮತ್ತು ಸ್ಮರಣಿಕೆಯನ್ನು ತನ್ನದಾಗಿಸಿಕೊಂಡಿದ್ದಾಳೆ.

ಈ ವಿದ್ಯಾರ್ಥಿನಿಗೆ ತರಬೇತಿ ನೀಡಿದ ಡಾ. ಜಾಕೀರಹುಸೇನ ಎಂ.ಕೊರ್ಲಹಳ್ಳಿ ಹಾಗೂ ಸಾಧಕ ವಿದ್ಯಾರ್ಥಿನಿಗೆ ಟ್ರಸ್ಟ್‌ನ ಅಧ್ಯಕ್ಷ ಎಂ.ಕೆ. ಕೊರ್ಲಹಳ್ಳಿ, ಸದಸ್ಯ ವಿನಾಯಕ ಬಳಗಾನೂರ, ರೆಹಮತ್ ನಗರದ ಅಂಗನವಾಡಿ ಕಾರ್ಯಕರ್ತರಾದ ಕಸ್ತೂರಿ ಆಲೂರ, ಸಾವಿತ್ರಿ, ಆಶಾ ಕಾರ್ಯಕರ್ತೆಯರಾದ ರೇಣುಕಾ, ಸಾಹೇರಾ ಕೊರ್ಲಹಳ್ಳಿ, ಮಾಲನ ಸುಂಕದ, ಜಿ.ಆರ್. ಭಜಂತ್ರಿ ಹಾಗೂ ತೋಟದ ಚಿಲ್ಲಾಳೇಶ್ವರ ಇಂಗ್ಲಿಷ್ ಮೀಡಿಯಂ ಶಾಲೆಯ ಮುಖ್ಯೋಪಾಧ್ಯಯರು, ಶಿಕ್ಷಕರ ಬಳಗ, ಸಿಬ್ಬಂದಿ ವರ್ಗದವರು ಅಭಿನಂದಿಸಿದ್ದಾರೆ.

### ಆಮೆ ಗತಿಯಲ್ಲಿ ಸಾಗಿದ ಕೆರೆಗಳಿಗೆ ನೀರು ತುಂಬಿಸುವ 140 ಕೋಟಿ ರೂ. ವೆಚ್ಚದ ಯೋಜನೆ

# ಈ ಬಾರಿಯಾದರೂ ಹರಿದುಬರುವಳೇ ತುಂಗೆ?

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ/ಶಿರಹಟ್ಟಿ

ತಾಲೂಕಿನ ಅಂಚಿಗೆ ಹರಿದಿರುವ ತುಂಗಭದ್ರಾ ನದಿಯಿಂದ ಕೆರೆಗಳಿಗೆ ನೀರು ತುಂಬಿಸಿದರೆ ಜನ-ಜಾನುವಾರುಗಳ ನೀರಿನ ದಾಹ ಇಂಗುತ್ತದೆ ಮತ್ತು ಅಂತರ್ಜಲ ಮಟ್ಟವೂ ಹೆಚ್ಚುತ್ತದೆ ಎಂಬ ಸದುದ್ದೇಶದಿಂದ ಸರ್ಕಾರ 140 ಕೋಟಿ ರೂ. ಅನುದಾನ ನೀಡಿ 6 ವರ್ಷ ಕಳೆದರೂ ಹನಿ ನೀರೂ ಕೆರೆಗಳಿಗೆ ಹರಿಯದಿರುವುದು ಜನಪ್ರತಿನಿಧಿಗಳ ಇಚ್ಛಾಶಕ್ತಿಯ ಕೊರತೆ ಹಾಗೂ ಅಧಿಕಾರಿಗಳ ದಿವ್ಯ ನಿರ್ಲಕ್ಷ್ಯಕ್ಕೆ ಹಿಡಿದ ಕನ್ನಡಿಯಾಗಿದೆ.

ಏನಿದು ಯೋಜನೆ: ಕರ್ನಾಟಕ ನೀರಾವರಿ ನಿಗಮದಿಂದ ಶಿರಹಟ್ಟಿ/ಲಕ್ಷ್ಮೇಶ್ವರ ತಾಲೂಕಿನ 20 ಕೆರೆಗಳು ತುಂಬಿದ ಬಳಿಕ ನೈಸರ್ಗಿಕ ಬಾಂದಾರಗಳಿಗೆ ತುಂಗಭದ್ರಾ ನದಿಯಿಂದ ನೀರು ತುಂಬಿಸುವ 140 ಕೋಟಿ ರೂ ವೆಚ್ಚದ ಯೋಜನೆ ಇದಾಗಿದೆ. ತಾಲೂಕಿನ ತುಂಗಭದ್ರಾ ನದಿ ಪಾತ್ರದ ಇಟಗಿ ಬಳಿ ಜಾಕ್‌ವೆಲ್ ನಿರ್ಮಿಸಿ, ಅಲ್ಲಿಂದ ದೊಡ್ಡ ಪೈಪ್‌ಲೈನ್ ಮೂಲಕ ಎತ್ತುವಳಿಯಾಗುವ ನೀರು, 3 ಕಡೆ ಡೆಲಿವರಿ ಚೆಂಬರ್‌ನಲ್ಲಿ ಸಂಗ್ರಹವಾಗುತ್ತದೆ. ಅಲ್ಲಿಂದ ತಾಲೂಕಿನ 20 ಪ್ರಮುಖ ಕೆರೆ ಮತ್ತು ಬಾಂದಾರಗಳಿಗೆ ನೀರು ಹರಿಸುವ ಮಹತ್ವಾಕಾಂಕ್ಷಿ ಯೋಜನೆ ಇದಾಗಿದೆ.

ಈ ಯೋಜನೆಯಲ್ಲಿ ತುಂಗಭದ್ರಾ ನದಿಯ ಸಮೀಪವೇ ಬೃಹತ್ ಜಾಕ್‌ವೆಲ್ ನಿರ್ಮಿಸಿ ಅಲ್ಲಿಂದ 835 ಎಚ್‌ಪಿ ಸಾಮರ್ಥ್ಯದ 5 ಮೋಟಾರ್ ಪಂಪ್‌ಗಳ ಮೂಲಕ ದೇವಿಹಾಳದ ಗುಡ್ಡದ ಮೇಲೆ ನಿರ್ಮಿಸುವ ನೀರು ಸಂಗ್ರಹಣಾ ಘಟಕಕ್ಕೆ ನೀರೆತ್ತಿ, ಅಲ್ಲಿಂದ ತಾಲೂಕಿನ 20 ಪ್ರಮುಖ ಕೆರೆಗಳಿಗೆ ನೀರು ನೈಸರ್ಗಿಕವಾಗಿ ಹರಿಯಲಿದೆ.

ನದಿ ನೀರು ಹರಿಯುವ 20 ಕೆರೆಗಳು: ಶಿರಹಟ್ಟಿ ತಾಲ್ಲೂಕಿನ ತಂಗೋಡ, ಕೆರೆಕೊಪ್ಪ, ವಡವಿ, ಬೆಳಗಟ್ಟಿ, ತಾರಿಕೊಪ್ಪದಲ್ಲಿ 2, ಬೆಳ್ಳಟ್ಟಿಯಲ್ಲಿ 3, ರಣತೂರು, ದೇವಿಹಾಳ, ಛಬ್ಬಿ, ಮಜ್ಜೂರು, ಲಕ್ಷ್ಮೇಶ್ವರ ತಾಲ್ಲೂಕಿನ ಕುಂದ್ರಳ್ಳಿ, ಶೆಟ್ಟಿಕೇರಿ, ಅಡರಕಟ್ಟಿ, ಮಂಜಲಾಪುರ, ಇಟ್ಟಿಗೆರೆ ಕೆರೆ, ಕೆಂಪಿಗೆರೆ ಕೆರೆ, ಮುತ್ತಿಕೆರೆಗಳಿಗೆ ನೀರು ತುಂಬಿದ ಬಳಿಕ ನೈಸರ್ಗಿಕವಾಗಿ ಮಾರ್ಗದ ಚೆಕ್ ಡ್ಯಾಂಗಳಿಗೆ ನೀರು ಹರಿಯಲಿದೆ.

ರಾಮಕೃಷ್ಣ ದೊಡ್ಡಮನಿ ಅವರು ಶಿರಹಟ್ಟಿ ಮತಕ್ಷೇತ್ರದ ಶಾಸಕರು ಮತ್ತು ನೀರಾವರಿ ನಿಗಮದ ಮುಖ್ಯಮಂತ್ರಿಗಳ ಸಂಸದೀಯ ಕಾರ್ಯದರ್ಶಿಯಾಗಿದ್ದ ವೇಳೆ ಈ ಯೋಜನೆ ಜಾರಿಗೊಳಿಸುವಲ್ಲಿ ಯಶಸ್ವಿಯಾಗಿದ್ದರು. ಮುಖ್ಯಮಂತ್ರಿಯಾಗಿದ್ದ ಸಿದ್ಧರಾಮಯ್ಯನವರೇ ಈ ಕಾಮಗಾರಿಯನ್ನು 2017ರಲ್ಲಿ ಉದ್ಘಾಟಿಸಿದ್ದರು. 2 ವರ್ಷದ ಅವಧಿಗೆ ಕಾಮಗಾರಿ ಪೂರ್ಣಗೊಳಿಸಬೇಕಿದ್ದ ಮಂಗಳೂರಿನ ಓಷಿಯನ್ ಕನ್‌ಸ್ಟ್ರಕ್ಷನ್ ಕಂಪನಿಯವರ ಆಮೆಗತಿಯ ಕಾಮಗಾರಿಯಿಂದ ಮಹತ್ವಾಕಾಂಕ್ಷಿ ಯೋಜನೆ 6 ವರ್ಷವಾದರೂ ಸಾಕಾರಗೊಳ್ಳದಿರುವುದು ನಿರ್ಲಕ್ಷದ ಪರಾಮಾವಾಧಿಯೇ ಸರಿ. ಕೋವಿಡ್, ತಾಂತ್ರಿಕ, ಆಡಳಿತಾತ್ಮಕ ಮತ್ತು ಅರಣ್ಯ ಇಲಾಖೆಯ ಪರವಾನಗಿಗಳ ಕಾರಣ ಹೇಳಿದ್ದರಿಂದ, ಈಗಾಗಲೇ 3 ಬಾರಿ ಕಾಮಗಾರಿ ಅವಧಿ ವಿಸ್ತರಣೆ ಮಾಡಿಕೊಡಲಾಗಿದೆ.

ಇನ್ನೂ ಪೈಪ್‌ಲೈನ್ ಅಳವಡಿಸುವುದು, ನೀರು ಸಂಗ್ರಹಣಾ ಘಟಕ ನಿರ್ಮಾಣ, ವಿದ್ಯುತ್ ಸರಬರಾಜು ಕಾಮಗಾರಿ ಸೇರಿ ಬಹಳಷ್ಟು ಕಾಮಗಾರಿಗಳು ಬಾಕಿಯಿವೆ. ಈಗ ಮತ್ತೆ ಸಿದ್ಧರಾಮಯ್ಯನವರೇ ಮುಖ್ಯಮಂತ್ರಿಗಳಾಗಿದ್ದು, ಬಿಜೆಪಿ ಶಾಸಕ ಡಾ.ಚಂದ್ರು ಲಮಾಣಿ ಕಾಮಗಾರಿಯ ಬಗ್ಗೆ ಸದನದಲ್ಲೂ ಧ್ವನಿಯೆತ್ತಿದ್ದಾರೆ. ಇನ್ನಾದರೂ ಕಾಮಗಾರಿ ತ್ವರಿತವಾಗಿ ನಡೆದು, ಮುಂಬರುವ ಮಳೆಗಾಲದಲ್ಲಿಯಾದರೂ ತುಂಗೆ ಹರಿದು ಬರುವಳೇ ಎಂದು ಕಾದು ನೋಡಬೇಕಿದೆ.






ಅನುದಾನ ಕಲ್ಪಿಸಿ ಆರೇಳು ವರ್ಷಗಳು ಕಳೆದರೂ ಜನಪ್ರತಿನಿಧಿಗಳ, ಅಧಿಕಾರಿಗಳ ನಿರ್ಲಕ್ಷದಿಂದ ಮಹತ್ವಾಕಾಂಕ್ಷಿ ಯೋಜನೆಗಳು ನೆನೆಗುದಿಗೆ ಬಿದ್ದಿವೆ. ಇನ್ನಾದರೂ ಕ್ಷೇತ್ರದ ಶಾಸಕರು ಕಾಮಗಾರಿಗಳನ್ನು ತ್ವರಿತಗತಿಯಲ್ಲಿ ಸಾಗುವಂತೆ ಮಾಡಿ, ಆದಷ್ಟು ಬೇಗ ಯೋಜನೆ ಸಾಕಾರಗೊಳ್ಳಲು ಇಚ್ಛಾಶಕ್ತಿ ತೋರಬೇಕು. ಇಲ್ಲದಿದ್ದರೆ ರೈತ-ರೊಡಗೂಡಿ ಬೀದಿಗಿಳಿದು ಹೋರಾಟ ಮಾಡಬೇಕಾಗುತ್ತದೆ.


**- ರಾಮಕೃಷ್ಣ ದೊಡ್ಡಮನಿ.**
**ಮಾಜಿ ಶಾಸಕರು.**

ಯೋಜನೆಯ ಕಾಮಗಾರಿ ಪ್ರಾರಂಭದಲ್ಲಿಯೇ ಹಲವಾರು ಕಾರಣದಿಂದ ವಿಳಂಬವಾಯಿತು. ಈಗಾಗಲೇ ಜಾಕವೆಲ್ ನಿರ್ಮಾಣ, ಪಂಪ್‌ಹೌಸ ನಿರ್ಮಾಣ, ಪೈಪ್‌ಲೈನ್ ಅಳವಡಿಸುವ ಕಾಮಗಾರಿ ಪೂರ್ಣಗೊಂಡಿದೆ. ಇನ್ನಷ್ಟು ಪೈಪ್‌ಲೈನ್ ಅಳವಡಿಕೆ, ವಿದ್ಯುತ್ ಸಂಪರ್ಕ, ಡೆಲಿವರಿ ಚೇಂಬರ್ ಕಾಮಗಾರಿ ಪ್ರಗತಿ ಹಂತದಲ್ಲಿದೆ. ಬರುವ ಮಾರ್ಚ್‌ನೊಳಗಾಗಿ ಕಾಮಗಾರಿ ಪೂರ್ಣಗೊಳಿಸಲಾಗುವುದು.

**- ನಾಗರಾಜ ಹೆಚ್.**
**ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರ, ಕರ್ನಾಟಕ ನೀರಾವರಿ ನಿಗಮ.**

ಜಾಲವಾಡ ಏತನೀರಾವರಿ ಯೋಜನೆಯ ಕಾಮಗಾರಿಗಳು ಆಮೆಗತಿಯಲ್ಲಿ ಸಾಗುತ್ತಿರುವುದರ ಬಗ್ಗೆ ಬೇಸರವಿದೆ. ಈ ಬಗ್ಗೆ ಅನೇಕ ಬಾರಿ ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿ ಬರುವ ಮಾರ್ಚ್‌ನೊಳಗೆ ಕಾಮಗಾರಿ ಪೂರ್ಣಗೊಳಿಸುವಂತೆ ಸಂಬಂಧಪಟ್ಟ ಇಂಜಿನಿಯರ್, ಅಧಿಕಾರಿಗಳು ಮತ್ತು ಗುತ್ತಿಗೆದಾರರಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದೇನೆ.

**- ಡಾ.ಚಂದ್ರು ಲಮಾಣಿ.**
**ಶಾಸಕರು.**



### ಗ್ರಾಮೀಣ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ತೊಡಕಾದ ಸಾರಿಗೆ ವ್ಯವಸ್ಥೆ

# ಸಮಯಕ್ಕೆ ಬಾರದ ಬಸ್-ವಿದ್ಯಾರ್ಥಿಗಳಿಂದ ಪ್ರತಿಭಟನೆ



■ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ

ತಾಲೂಕಿನ ವಿವಿಧ ಗ್ರಾಮೀಣ ಪ್ರದೇಶಗಳಿಂದ ನಿತ್ಯ ಪಟ್ಟಣಕ್ಕೆ ಬರುವ ವಿಧ್ಯಾರ್ಥಿಗಳಿಗೆ ಸಮಯಕ್ಕೆ ಸರಿಯಾಗಿ ಬಸ್ ಸಿಗದೇ ಕಾಲೇಜಿನ ತರಗತಿಗಳಿಗೆ ತಲುಪಲು ಸಮಸ್ಯೆಯಾಗುತ್ತಿದ್ದು, ಈ ಕುರಿತು ಸಾರಿಗೆ ಇಲಾಖೆ ಅಧಿಕಾರಿಗಳಿಗೆ ತಿಳಿಸಿದರೂ ಪ್ರಯೋಜನವಾಗಿಲ್ಲ ಎಂದು ಆರೋಪಿಸಿದ ವಿದ್ಯಾರ್ಥಿಗಳು, ಬುಧವಾರ ಬೆಳಿಗ್ಗೆ ಬಸ್ ನಿಲ್ದಾಣದಲ್ಲಿ ಬಸ್‌ಗಳನ್ನು ತಡೆದು ಕೆಲಕಾಲ ಪ್ರತಿಭಟನೆ ನಡೆಸಿ ತಮ್ಮ ಆಕ್ರೋಶವನ್ನು ಹೊರಹಾಕಿದರು.

ವಿಧ್ಯಾರ್ಥಿ ಮುಖಂಡರಾದ ಸುನೀಲ ಸಾಳುಂಕೆ, ಲಕ್ಷ್ಮಣ ಲಮಾಣಿ ಮಾತನಾಡಿ, ಈಗಾಗಲೇ ಪದವಿ, ಇಂಜಿನಿಯರಿಂಗ್ ಮತ್ತು ಡಿಪ್ಲೋಮಾ ತರಗತಿಗಳು ಪ್ರಾರಂಭವಾಗಿವೆ. ವಾರ್ಷಿಕ ಪರೀಕ್ಷೆಗಳು ಸಮೀಪಿಸುತ್ತಿದ್ದು, ನಿತ್ಯ ಬಸ್ ಸಮಸ್ಯೆಯಿಂದಾಗಿ ತರಗತಿಗಳಿಗೆ ಹಾಜರಾಗಲು ಆಗುತ್ತಿಲ್ಲ. ಗ್ರಾಮೀಣ ಪ್ರದೇಶಗಳಿಂದ ಜಿಲ್ಲಾ ಕೇಂದ್ರ ಗದಗ, ಶಿರಹಟ್ಟಿ, ಮುಂಡರಗಿ, ಲಕ್ಷ್ಮೇಶ್ವರಗಳಿಗೆ ಹೈಸ್ಕೂಲ್, ಕಾಲೇಜು ಶಿಕ್ಷಣಕ್ಕೆ ಹೋಗುತ್ತಿದ್ದು, ಸಮಯಕ್ಕೆ ಸರಿಯಾಗಿ ಬಸ್ ವ್ಯವಸ್ಥೆ ಇಲ್ಲದೆ ಪರದಾಡುವಂತಾಗಿದೆ. ಎಸ್‌ಎಸ್‌ಎಲ್‌ಸಿ, ಪಿಯುಸಿ ಹಾಗೂ ಅಂತಿಮ ವರ್ಷದ ಪದವಿ ತರಗತಿಗಳು ಪ್ರಾರಂಭವಾದರೂ ಪೂರ್ಣ ಪ್ರಮಾಣದಲ್ಲಿ ವಿದ್ಯಾರ್ಥಿಗಳು ಹಾಜರಾಗಲು ಸಾಧ್ಯವಾಗುತ್ತಿಲ್ಲ. ಗ್ರಾಮೀಣ ಪ್ರದೇಶದ ಬಹುತೇಕ ವಿದ್ಯಾರ್ಥಿಗಳಿಗೆ ಸಾರಿಗೆ ಸಂಚಾರ ತೊಂದರೆ-ಯಾಗಿ ಪರಿಣಮಿಸಿದೆ. ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ನಿಗದಿತ ಸಮಯಕ್ಕೆ ಬಸ್ ಓಡಿಸಬೇಕು ಎಂದು ಆಗ್ರಹಿಸಿದರು.

ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ಡಿಪೋ ಮ್ಯಾನೇಜರ್ ಶಾಂತಾಬಾಯಿ ಕದಂಪೂರ ಜಿಲ್ಲಾ ವಿಭಾಗೀಯ ಸಾರಿಗೆ ನಿಯಂತ್ರಣಾಧಿಕಾರಿಯೊಂದಿಗೆ ದೂರವಾಣಿಯಲ್ಲಿ ಮಾತನಾಡಿ, ವಾಸ್ತವ ಸ್ಥಿತಿ ತಿಳಿಸಿದರು. ಅವರ ಸೂಚನೆಯಂತೆ ಎರಡು-ಮೂರು ದಿನಗಳಲ್ಲಿ ಬಸ್ ಓಡಿಸುವ ಭರವಸೆ ನೀಡಿದ ನಂತರ ವಿದ್ಯಾರ್ಥಿಗಳು ಪ್ರತಿಭಟನೆ ಕೈಬಿಟ್ಟರು.

ಕರವೆ ತಾಲೂಕು ಘಟಕದ ಅಧ್ಯಕ್ಷ ಬಸವರಾಜ ವಡವಿ, ಕುಂದುಕೊರತೆ ಸಂಘಟನೆ ಅಧ್ಯಕ್ಷ ಅಕಬರ ಯಾದಗಿರಿ ಮಾತನಾಡಿ, ದಿನಕ್ಕೆ ಒಂದು ಅಥವಾ ಎರಡು ಬಸ್‌ಗಳು ಸಂಚರಿಸುವ ಬಹುತೇಕ ಹಳ್ಳಿಗಳು ತಾಲೂಕಿನಲ್ಲಿವೆ. ಇಂತಹ ಹಳ್ಳಿಯ ವಿದ್ಯಾರ್ಥಿಗಳು ತರಗತಿಯ ಸಮಯಕ್ಕೆ ಶಾಲೆ-ಕಾಲೇಜುಗಳಿಗೆ ಬರಲು ಸಾಧ್ಯವಾಗುತ್ತಿಲ್ಲ. ಸಾರಿಗೆ ಇಲಾಖೆ ಅಧಿಕಾರಿಗಳನ್ನು ಸಂಪರ್ಕಿಸಿದರೆ ಬರಿಯ ಹಾರಿಕೆ ಉತ್ತರ ನೀಡಿ ಸುಮ್ಮನಾಗುತ್ತಾರೆ ಎಂದು ದೂರಿದರು.

# 'ಪುನೀತ್‌ರಾಜ್ ವೃತ್ತ' ನಾಮಕರಣಕ್ಕೆ ಮನವಿ



■ವಿಜಯಸಾಕ್ಷಿ ಸುದ್ದಿ, ಗದಗ

ಯುವರತ್ನ ಪುನೀತ ರಾಜಕುಮಾರ ಅವರ ಹೆಸರು ಅಜರಾಮರವಾಗಿರಬೇಕಾದರೆ, ನಗರದ ಭೀಷ್ಮ ಕೆರೆಯ ಹತ್ತಿರವಿರುವ ಬನ್ನಿಕಟ್ಟೆ ದೇವಸ್ಥಾನದ ಹಿಂದುಗಡೆಯ ವೃತ್ತದಲ್ಲಿ ಅವರ ಪುತ್ಥಳಿಯನ್ನು ಸ್ಥಾಪಿಸಿ, ವೃತ್ತಕ್ಕೆ ಅವರ ಹೆಸರು ನಾಮಕರಣ ಮಾಡುವಂತೆ ಅಖಿಲ ಕರ್ನಾಟಕ ಡಾ. ರಾಜಕುಮಾರ ಅಭಿಮಾನಿಗಳ ಸಂಘಗಳ ಒಕ್ಕೂಟ ಹಾಗೂ ಡಾ. ಶಿವರಾಜಕುಮಾರ ಅಭಿಮಾನಿಗಳ ಸಂಘ, ರಾಜರತ್ನ ಪುನೀತ ರಾಜಕುಮಾರ ಅಭಿಮಾನಿಗಳ ಸಂಘದ ಗದಗ ಜಿಲ್ಲಾ ಘಟಕದ ಜಿಲ್ಲಾಧ್ಯಕ್ಷ ವಿಠ್ಠಲ ಪರಾಪೂರ ಹಾಗೂ ಪ್ರಧಾನ ಕಾರ್ಯದರ್ಶಿ ಮಲ್ಲಿಕಾರ್ಜುನ ಸಂಗಾಪೂರ ನೇತೃತ್ವದಲ್ಲಿ ಸಚಿವ ಡಾ. ಎಚ್.ಕೆ. ಪಾಟೀಲರಿಗೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾಧ್ಯಕ್ಷ ವಿಠ್ಠಲ ಪರಾಪೂರ, ಶಹರಾಧ್ಯಕ್ಷ ಮಲ್ಲೇಶ ಪರಾಪೂರ, ಮಹಿಳಾ ಘಟಕದ ಅಧ್ಯಕ್ಷರಾದ ರೇಖಾ ಬಂಗಾರಶೆಟ್ಟರ್, ಪ್ರಧಾನ ಕಾರ್ಯದರ್ಶಿ ಮೇಘನಾ ಎಂ.ಕೊಟ್ಟೂರು, ಗದಗ ಜಿಲ್ಲಾ ಮಹಿಳಾ ಘಟಕದ ಉಪಾಧ್ಯಕ್ಷೆ ಫಾತಿಮಾ ಹೊನ್ನಾಪೂರ ಸೇರಿದಂತೆ ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.

# ರಕ್ಷಣಾ ಶುಭವಾರ್ತೆ ಯಾತ್ರೆ

■ವಿಜಯಸಾಕ್ಷಿ ಸುದ್ದಿ, ಕೊಪ್ಪಳ

ಜಿಲ್ಲಾ ಪಾಸ್ಟರ್ಸ್ ಅಸೋಸಿಯೇಷನ್ ವತಿಯಿಂದ ಕ್ರಿಸ್‌ಮಸ್ ಹಬ್ಬದ ನಿಮಿತ್ತ ನಗರದ ಪ್ರಮುಖ ಬೀದಿಗಳಲ್ಲಿ ರಕ್ಷಣಾ ಶುಭವಾರ್ತೆ ಯಾತ್ರೆ ಜರುಗಿತು. ಭಾಗ್ಯನಗರದ ಪ.ಪಂ ಬಳಿಯಿಂದ ಪ್ರಾರಂಭವಾದ ಯಾತ್ರೆಯು ಹಳೆ ಜಿಲ್ಲಾ ಸರ್ಕಾರಿ ಆಸ್ಪತ್ರೆಯವರೆಗೆ ಸುಮಾರು 7 ಕಿಲೋಮೀಟರ್ ಕ್ರಮಿಸಿ ಸಮಾರೋಪಗೊಂಡಿತು.

ಜಿಲ್ಲಾ ಫಾಸ್ಟರ್ಸ್ ಅಸೋಸಿಯೇಷನ್ ಅಧ್ಯಕ್ಷ ಹಾಗೂ ನವನಗರ ಚರ್ಚ್‌ನ ಫಾದರ್ ಚನ್ನಬಸಪ್ಪ ಅಪ್ಪಣ್ಣವರ್ ಮಾತನಾಡಿ, ಯೇಸು ಸ್ವಾಮಿಯು ಭೂಮಿಯ ಮೇಲೆ ತಮ್ಮ ಪಾಪದಿಂದ ಬಳಲುತ್ತಿರುವವರನ್ನು ರಕ್ಷಿಸಿ, ಸ್ವರ್ಗವನ್ನು ಕಲ್ಪಿಸುವುದಕ್ಕಾಗಿ ಮಾನವ ರೂಪ ತಾಳಿ ಜನಿಸಿದ್ದಾರೆ ಎಂದರು.

ಎಂ.ಬಿ. ಓಲಿವ್ ಚರ್ಚಿನ ಫಾದರ್ ಡಿ.ಆರ್. ಪೀಟರ್ ಮಾತನಾಡಿದರು. ಭ್ರಾತೃತ್ವ ಸಮಿತಿಯ ಜಿಲ್ಲಾ ಸಂಚಾಲಕ ಎಸ್.ಎ. ಗಫಾರ್ ಯಾತ್ರೆಯನ್ನು ಸ್ವಾಗತಿ, ಶುಭಕೋರಿ ಬೀಳ್ಕೊಟ್ಟರು. ಗಡಿಯಾರ ಕಂಬದ ವೃತ್ತದಲ್ಲಿ ಜೀಸಸ್ ಪ್ರೇಯರ್ ಫೆಲೋಶಿಪ್ ಚರ್ಚಿನ ಫಾದರ್ ಎಂ.ಡೇವಿಡ್, ಕರ್ನಾಟಕ ರಾಜ್ಯ ಕಟ್ಟಡ ಕಟ್ಟುವ ಮತ್ತು ಕಲ್ಲು ಒಡೆಯುವ ಕ್ವಾರಿ ಕಾರ್ಮಿಕರ ಸಂಘದ ಜಿಲ್ಲಾ ಸಂಘಟನಾ ಸಂಚಾಲಕ ತುಕಾರಾಮ್ ಬಿ. ಪಾತ್ರೋಟಿ ಮಾತನಾಡಿದರು.

ಮಹಾಸಭಾದ ಕೊಪ್ಪಳ ತಾಲೂಕಾಧ್ಯಕ್ಷ ಪ್ರಕಾಶ್ ದೇವರಮ,. ಜಿಲ್ಲಾ ಪಾಸ್ಟರ್ಸ್ ಅಸೋಸಿಯೇಷನ್ ಕಾರ್ಯದರ್ಶಿ ಫಾದರ್ ಡಿ.ರಾಜು, ಮರಿಯಮ್ಮ ದೇವಿ ಕಾರ್ಮಿಕರ ಹಿತರಕ್ಷಣಾ ಸಂಘದ ಅಧ್ಯಕ್ಷ ಮೌಲಾ ಸಾಬ್ ಕಪಾಲಿ, ಫಾದರ್ ಅಬ್ರಹಾಂ, ಫಾದರ್ ಪ್ರಕಾಶ್ ಹಾಗೂ ಮಹಿಳಾ ಪ್ರತಿನಿಧಿಗಳು ಭಾಗವಹಿಸಿದ್ದರು.



# ನಾಳೆ ಜಿಲ್ಲಾಮಟ್ಟದ ಪ್ರತಿಭಾ ಕಾರಂಜಿ

■ವಿಜಯಸಾಕ್ಷಿ ಸುದ್ದಿ, ಧಾರವಾಡ

ಜಿಲ್ಲಾ ಪಂಚಾಯತ್, ಶಾಲಾ ಶಿಕ್ಷಣ ಇಲಾಖೆ ಮತ್ತು ಧಾರವಾಡದ ಭಾರತ ಪ್ರೌಢಶಾಲೆಯ ಸಂಯುಕ್ತಾಶ್ರಯದಲ್ಲಿ ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿ ಕಾರ್ಯಕ್ರಮವನ್ನು ಡಿ.22 ನಗರದ ಶಿವಾಜಿ ಸರ್ಕಲ್ ಹತ್ತಿರದ ಭಾರತ ಪ್ರೌಢಶಾಲೆಯಲ್ಲಿ ಆಯೋಜಿಸಲಾಗಿದೆ.

ಕಾರ್ಯಕ್ರಮದಲ್ಲಿ ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ವಿ.ಪ ಸಭಾಪತಿ ಬಸವರಾಜ ಹೊರಟ್ಟಿ ಉಪಸ್ಥಿತರಿರುವರು. ಕಾರ್ಮಿಕ ಇಲಾಖೆ, ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಎಸ್.ಲಾಡ್ ಕಾರ್ಯಕ್ರಮ ಉದ್ಘಾಟಿಸುವರು. ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಹಾಗೂ ಸಕಾಲ ಸಚಿವ ಮಧು ಬಂಗಾರಪ್ಪ ಹಾಗೂ ವಿ.ಪ ಸರ್ಕಾರಿ ಮುಖ್ಯ ಸಚೇತಕ ಸಲೀಂ ಅಹ್ಮದ ಅವರು ವಿಶೇಷ ಅತಿಥಿಗಳಾಗಿ ಆಗಮಿಸುವರು. ಶಾಸಕ ಅರವಿಂದ ಬೆಲ್ಲದ ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು.

ಮುಖ್ಯ ಅತಿಥಿಗಳಾಗಿ ವಿ.ಪ ಸದಸ್ಯ, ಮಾಜಿ ಮುಖ್ಯಮಂತ್ರಿ ಜಗದೀಶ ಶೆಟ್ಟರ್, ಶಾಸಕರಾದ ವಿನಯ ಕುಲಕರ್ಣಿ, ಅಬ್ಬಯ್ಯ ಪ್ರಸಾದ, ಎನ್.ಎಚ್. ಕೋನರಡ್ಡಿ, ಎಸ್.ವ್ಹಿ. ಸಂಕನೂರ, ಪ್ರದೀಪ ಶೆಟ್ಟರ, ಮಹೇಶ ಟೆಂಗಿನಕಾಯಿ, ಎಂ.ಆರ್. ಪಾಟೀಲ್, ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ಮಹಾಪೌರರಾದ ವೀಣಾ ಚೇತನ ಭಾರದ್ವಾಡ ಭಾಗವಹಿಸುವರು.

ಜಿಲ್ಲಾಧಿಕಾರಿ ಗುರುದತ್ತ ಹೆಗಡೆ, ಜಿ.ಪಂ. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಟಿ.ಕೆ. ಸ್ವರೂಪ, ಶಾಲಾ ಶಿಕ್ಷಣ ಇಲಾಖೆಯ ಅಪರ ಆಯುಕ್ತೆ ಜಯಶ್ರೀ ಶಿಂತ್ರಿ, ಸಿಸ್ಲೆಪ್ ನಿರ್ದೇಶಕ ಡಾ. ಬಿ.ಕೆ.ಎಸ್. ವರ್ಧನ್, ಮರಾಠಾ ವಿದ್ಯಾಪ್ರಸಾರಕ ಮಂಡಳಿಯ ಅಧ್ಯಕ್ಷ ಎಂ.ಎನ್. ಮೋರೆ, ಕಾರ್ಯದರ್ಶಿ ರಾಜು ಬಿರ್ಜಣ್ಣವರ, ಮಹಾಂತೇಶ ಪ್ರಾಥಮಿಕ ಹಾಗೂ ಪ್ರೌಢಶಾಲೆಯ ಅಧ್ಯಕ್ಷ ರವಿ ಎಫ್. ಜಾಂಬೋಟಿಕರ ವಿಶೇಷ ಆಹ್ವಾನಿತರಾಗಿ ಪಾಲ್ಗೊಳ್ಳುವರು ಎಂದು ಪ್ರಕಟಣೆ ತಿಳಿಸಿದೆ.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka